ಸಂಪುಟ : 8 ಸಂಚಿಕೆ : 201 ಪುಟ : 4 ಬೆಲೆ : 3.00 ಗುರುವಾರ ಸೆಪ್ಟೆಂಬರ್ 14, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 201 Pages : 4 Price : 3.00 Thursday September 14, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ವಿವಿಧ ಮಠಾಧೀಶರು, ಗಣ್ಯರ ಉಪಸ್ಥಿತಿಯಲ್ಲಿ ತ್ರಿಕೋಟಿ ಶಿವಲಿಂಗ ಸ್ಥಾಪನೆಗೆ ಭೂಮಿಪೂಜೆ

# ಮುಕ್ತಿಮಂದಿರ ಜಾಗತಿಕ ಧರ್ಮಕ್ಷೇತ್ರವಾಗಲಿದೆ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪರಮತಪಸ್ವಿ ಲಿಂ.ಶ್ರೀ ವೀರಗಂಗಾಧರ ಜಗದ್ಗುರುಗಳು ಲೋಕ ಕಲ್ಯಾಣಕ್ಕಾಗಿ ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ತ್ರಿಕೋಟಿ ಶಿವಲಿಂಗ ಪ್ರತಿಷ್ಠಾಪನೆಯಾಗಬೇಕು, ಈ ಪವಿತ್ರ ಕ್ಷೇತ್ರ ದರ್ಶನದಿಂದ ಭಕ್ತರ ಕಷ್ಟ-ಕಾರ್ಪಣ್ಯ, ಪಾಪ ಕರ್ಮಗಳು ಕಳೆದು ಶಾಂತಿ, ನೆಮ್ಮದಿ, ಸಮೃದ್ಧಿ, ಪುಣ್ಯ ಪ್ರಾಪ್ತಿಯಾಗಬೇಕೆಂಬ ಸತ್ಯಸಂಕಲ್ಪ ನಿರ್ವಿಘ್ನವಿಲ್ಲದೇ ವರ್ಷದೊಳಗೆ ಪೂರ್ಣಗೊಂಡು ಲೋಕಾರ್ಪಣೆಗೊಳ್ಳಲಿದೆ ಎಂದು ನೊಣವಿನಕೇರಿ ಕಾಡಸಿದ್ದೇಶ್ವರಮಠ ಡಾ. ಕರಿವೃಷಭದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮಿಗಳು ಹೇಳಿದರು.



ಬುಧವಾರ ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ತ್ರಿಕೋಟಿ ಶಿವಲಿಂಗ ಪ್ರತಿಷ್ಠಾನೆಯ ಕಾರ್ಯಕ್ಕೆ ಭೂಮಿಪೂಜೆ, ಹೋಮ-ಹವನ ಕಾರ್ಯಕ್ರಮದ ಬಳಿಕ ಧರ್ಮಸಭೆಯನ್ನುದ್ದೇಶಿಸಿ ಶ್ರೀಗಳು ಆಶೀರ್ವಚನ ನೀಡಿದದರು.

ಕಳೆದ ಹತ್ತಾರು ವರ್ಷಗಳಿಂದ 5 ಸಾವಿರ ಶಿವಲಿಂಗ ಸಂಗ್ರಹಕ್ಕಾಗಿ ಕ್ಷೇತ್ರದ ಪಟ್ಟಾಧ್ಯಕ್ಷರು ಶ್ರಮಿಸಿದ್ದಾರೆ. ಜಗದ್ಗುರುಗಳ ಪ್ರೇರಣೆಯಿಂದ ಇದೀಗ ಲಿಂಗ ಪ್ರತಿಷ್ಠಾಪನೆಗೆ ಶ್ರೀಮಠದ ಪರಮಭಕ್ತ ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರರ ಸಹಾಯ-ಸಹಕಾರ ಬಹಳಷ್ಟಿದೆ. ಅಲ್ಲದೇ ಅನೇಕ ಮಂತ್ರಿ ಮಹೋದಯರು, ರಾಜಕಾರಣಿಗಳು, ಈ ಭಾಗದ ಹಿರಿಯರು, ಶ್ರೀಮಠದ ಭಕ್ತರು ತನು-ಮನ-ಧನದ ಸಹಕಾರ ನೀಡಿದ್ದಾರೆ. ಪ್ರತಿಷ್ಠಾಪನೆಯಾಗುವ ಪ್ರತಿ ಶಿವಲಿಂಗದ ಮೇಲೆ ಬಸವಣ್ಣನ ಮೂರ್ತಿಯ ಬಾಯಿಯಿಂದ ಜಲಾಭಿಷೇಕವಾಗಿ ಅದು ಅತ್ಯಂತ ವ್ಯವಸ್ಥಿತವಾಗಿ ಒಂದೆಡೆ ಸಂಗ್ರಹಗೊಂಡು ತ್ರಿಕೋಟೇಶ್ವರ ತೀರ್ಥಸ್ಥಾನವಾಗಲಿದೆ. ಸಾಗರೋಪಾದಿಯಲ್ಲಿ ಹರಿದು ಬರುವ ಭಕ್ತರಿಗೆ ನಿತ್ಯ ಪ್ರಸಾದ ಸೇವೆ, ಮೂಲಭೂತ ಸೌಲಭ್ಯ ಕಲ್ಪಿಸಲಾಗುವುದು. ಸೂರ್ಯ ಚಂದ್ರರಿರುವವರೆಗೂ ಈ ಕ್ಷೇತ್ರದ ಜಾಗತಿಕ ಧರ್ಮಕ್ಷೇತ್ರವಾಗಿ ಪರಿಣಮಿಸಲಿದೆ ಎಂದರು.

ನೇತೃತ್ವ ವಹಿಸಿದ ವಿಮಲ ರೇಣುಕ ವೀರಮುಕ್ತಿಮುನಿ ಶ್ರೀಗಳು ಮಾತನಾಡಿ, ಲಿಂ. ವೀರಗಂಗಾಧರ ಜಗದ್ಗುರುಗಳ ವೀರಸಂಕಲ್ಪ ಸಾಕಾರಗೊಳ್ಳುತ್ತಿರುವುದು ನಾಡಿನ ಭಕ್ತರಿಗೆ ಹರ್ಷ ತಂದಿದೆ. ಹಿರಿಯ ಶ್ರೀಗಳೆಲ್ಲರ ಆಶೀರ್ವಾದ, ಭಕ್ತರ ಸಹಾಯ-ಸಹಕಾರದಿಂದ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಕಾಯಾ-ವಾಚಾ-ಮನಸಾ ಪೂರ್ವಕ ಶ್ರಮಿಸುತ್ತೇವೆ. ಹಲವು ವರ್ಷಗಳ ಕನಸು ನನಸಾಗುವ ಕಾರ್ಯ ಪ್ರಾರಂಭವಾಗಿರುವದಕ್ಕೆ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಅವರ ವಿಶೇಷ ಕಾಳಜಿ, ಸಹಕಾರ ಕಾರಣವಾಗಿದ್ದು, ಶ್ರೀಮಠದ ಬಗ್ಗೆ ಅವರಿಟ್ಟಿರುವ ಅಚಲ ಭಕ್ತಿ, ಶ್ರದ್ಧೆಯಿಂದ ಇಂದು ಉನ್ನತ ಹುದ್ದೆಯನ್ನು ಅಲಂಕರಿಸಿದ್ದಾರೆ. ಉಸ್ತುವಾರಿಯನ್ನು ರಾಜ್ಯದ ಪ್ರಮುಖ ಇಂಜಿನಿಯರಗಳು ಮತ್ತು ಗುತ್ತಿಗೆದಾರರು ವಹಿಸಿಕೊಂಡಿದ್ದು, ಸುಮಾರು 11 ತಿಂಗಳೊಳಗಾಗಿ ಯೋಜನೆ ಪೂರ್ಣಗೊಳ್ಳುವಂತೆ ನಿರ್ಧರಿಸಲಾಗಿದೆ. ಮುಂದಿನ ವರ್ಷ ಇದೇ ವೇಳೆ ತ್ರಿಕೋಟಿ ಲಿಂಗಗಳು ಸ್ಥಾಪನೆ ಲೋಕಾರ್ಪಣೆ ಕಾರ್ಯವೂ ಸಹ ಅದ್ದೂರಿಯಾಗಿ ನಡೆಯುವಂತೆ ಮಾಡಬೇಕಾಗಿದೆ. ಭಕ್ತ ಸಮೂಹದವರೆಲ್ಲರೂ ಎಲ್ಲರೂ ಸೇರಿ ಈ ಅಭೂತಪೂರ್ವ

▸▸3ನೇ ಪುಟಕ್ಕೆ



> 'ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ' ಎಂಬ ವಿಶ್ವಮಾನವ ಸಂದೇಶ ಸಾರಿದ ಜಗದ್ಗುರುಗಳು 'ಮಾನವ ಕುಲಂ-ತಾನೊಂದೆ ವಲಂ' ಎಂಬಂತೆ ಕ್ಷೇತ್ರದಲ್ಲಿ ಸರ್ವ ಧರ್ಮ ಸಂಸ್ಥಾಪಕರ ಮೂರ್ತಿ ಪ್ರತಿಷ್ಠಾಪಿಸಿ ಸಮನ್ವಯತೆಗೆ ಸಾಕ್ಷಿಯಾಗಿದ್ದಾರೆ. ಪ್ರಸ್ತುತ ರಾಜ್ಯ, ರಾಷ್ಟ್ರದಲ್ಲಿ ಉಂಟಾಗಿರುವ ಜಾತಿ, ಧರ್ಮಗಳ ನಡುವಿನ ಸಂಘರ್ಷದ ಇತಿಶ್ರೀಗೆ ಲಿಂ.ಜಗದ್ಗುರುಗಳ ಶಾಂತಿ, ಸೌಹಾರ್ದತೆಯ ಮಂತ್ರ ಸಮಾಜಕ್ಕೆ ಸಂದೇಶವಾಗಲಿದೆ.
>
> **– ಡಾ. ಕರಿವೃಷಭದೇಶಿಕೇಂದ್ರ ಶಿವಯೋಗೀಶ್ವರ ಶ್ರೀಗಳು.**
> ನೊಣವಿನಕೇರಿ ಕಾಡಸಿದ್ದೇಶ್ವರಮಠ.

## ಕಾವೇರಿ ವಿಚಾರದಲ್ಲಿ ಸರ್ಕಾರದೊಂದಿಗೆ ನಿಲ್ಲುತ್ತೇವೆ

**■ವಿಜಯಸಾಕ್ಷಿ ಸುದ್ದಿ, ಗದಗ**

ವಿರೋಧಗಳ ನಡುವೆಯೂ ಈಗಾಗಲೇ ತಮಿಳುನಾಡಿಗೆ ಕರ್ನಾಟಕದಿಂದ ಕಾವೇರಿ ನೀರನ್ನು ಸಾಕಷ್ಟು ಹರಿಸಿದ್ದಾರೆ. ಇದರಿಂದ ಡ್ಯಾಂನಲ್ಲಿ ನೀರು ಇಲ್ಲದಂತಾಗಿದೆ. ಹದಿನೈದು ದಿನಗಳ ಕಾಲ 10 ಸಾವಿರ ಕ್ಯೂಸೆಕ್ ಹಾಗೂ ಇನ್ನೂ 15 ದಿನಗಳ ಕಾಲ 5 ಸಾವಿರ ಕ್ಯೂಸೆಕ್ ನೀರು ಹರಿಸಿದ್ದಾರೆ. ಹೀಗಾಗಿ, ಕುಡಿಯಲೂ ಸಹ ನೀರು ಇಲ್ಲದ ಪರಿಸ್ಥಿತಿ ಉಂಟಾಗಿದೆ. ಇನ್ನು ಮುಂದೆ ತಮಿಳುನಾಡಿಗೆ ನೀರು ಬಿಡಬಾರದು ಎಂದು ಹೇಳಿದ್ದೇವೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ಬುಧವಾರ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ತಮಿಳುನಾಡಿಗೆ ಕಾವೇರಿ ನೀರು ಹರಿಸುವ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, 12ನೇ ತಾರೀಖಿನ ನಂತರ ನೀರು ಬಿಡುವುದಿಲ್ಲ ಎಂದು ಸುಪ್ರೀಂ ಕೋರ್ಟ್‌ಗೆ ಈಗಾಗಲೇ ಅಫಿಡವಿಟ್ ಹಾಕಿದ್ದಾರೆ. ಸರ್ಕಾರ ಇದಕ್ಕೆ ಬದ್ಧವಾಗಿರಬೇಕು ಎಂದು ಹೇಳಿದ್ದೇನೆ. ಸರ್ವಪಕ್ಷಗಳ ಸಭೆಯಲ್ಲಿ ಈ ತೀರ್ಮಾನ ಮಾಡಿದ್ದರೆ. ಈ ವಿಚಾರದಲ್ಲಿ ನಾವೂ ಸಹ ಸರ್ಕಾರದೊಂದಿಗೆ ಗಟ್ಟಿಯಾಗಿ ನಿಲ್ಲುತ್ತೇವೆ ಎಂದರು.

ಇದರ ಹೊರತಾಗಿಯೂ ನೀರು ಬಿಟ್ಟಿದ್ದೇ ನಿಜವಾದರೆ, ಕಾವೇರಿ ಜಲಾನಯನ ಪ್ರದೇಶದ ರೈತರು ಹಾಗೂ ಜನರಿಗೆ ಸರ್ಕಾರ ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ ಎಂದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹಾವೇರಿ ಕ್ಷೇತ್ರದಿಂದ ಸ್ಪರ್ಧಿಸುವ ವಿಚಾರವಾಗಿ ಪ್ರತಿಕ್ರಿಯಿಸಿ, ನಾನು ಟಿಕೆಟ್ ಆಕಾಂಕ್ಷಿ ಅಲ್ಲ ಎಂದು ಈಗಾಗಲೇ ಉತ್ತರ ನೀಡಿದ್ದೇನೆ. ಯಾವ ಕ್ಷೇತ್ರದ ಬಗ್ಗೆಯೂ ಇದುವರೆಗೆ ಚರ್ಚೆ ನಡೆದಿಲ್ಲ. ಯಾವ ಸೂಚನೆಯೂ ಬಂದಿಲ್ಲ. ಹೀಗಾಗಿ, ಅವೆಲ್ಲ ಬರಿಯ ಊಹಾಪೋಹಾಗಳಷ್ಟೇ ಎಂದರು.

ಚೈತ್ರಾ ಕುಂದಾಪುರ ಕೋಟ್ಯಾಂತರ ರೂ ಹಗರಣ ನಡೆಸಿರುವ ವಿಚಾರವಾಗಿ ಪ್ರತಿಕ್ರಿಯಿಸಿ, ಅವರು ಯಾರ್ಯಾರಿಗೆ ಏನೇನು ಹೇಳಿದ್ದಾರೆ ಎನ್ನುವ ಮಾಹಿತಿ ನನಗಿಲ್ಲ. ಆದರೆ, ವಿಚಾರವೇನೇ ಇದ್ದರೂ ತನಿಖೆ ನಡೆದು ಸತ್ಯಾಸತ್ಯತೆ ಹೊರಗೆ ಬರಲಿ ಎಂದರು.

## ನಾಳೆ ವಿಶ್ವೇಶ್ವರಯ್ಯ ಜನ್ಮದಿನಾಚರಣೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಸರ್ ಎಂ.ವಿಶ್ವೇಶ್ವರಯ್ಯ ಅವರ ಜನ್ಮದಿನದ ಅಂಗವಾಗಿ ಇದೇ ಸೆ. 15ರಂದು ಸಂಜೆ 5.30ಕ್ಕೆ ನಗರದ ಕನಕ ಭವನದಲ್ಲಿ ಅಭಿಯಂತರರ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಅಸೋಸಿಯೇಶನ್ ಗದಗ ಅಧ್ಯಕ್ಷ ಶಂಕರ ಬಾಕಳೆ ತಿಳಿಸಿದರು.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಭಿಯಂತರರ ದಿನಾಚರಣೆ ಸಂದರ್ಭದಲ್ಲಿ ಅಸೋಸಿಯೇಶನ್ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವೂ ನಡೆಯಲಿದೆ ಎಂದರು. ಇಂಜಿನಿಯರ್ ಮಲ್ಲಿಕಾರ್ಜುನ ಐಲಿ ಮಾತನಾಡಿ, ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಅಸೋಸಿಯೇಶನ್ ಗದಗ ಕಳೆದ 28 ವರ್ಷಗಳಿಂದ ಸಮಾಜಮುಖಿ ಕಾರ್ಯದಲ್ಲಿ ತೊಡಗಿಕೊಂಡಿ-ದೆ. ಅಭಿಯಂತರ ದಿನಾಚರಣೆ ಮೂಲಕ ಸಾಮಾಜಿಕ ಕಾರ್ಯಗಳು, ಇಂಜಿನಿಯರಿಂಗ್ ಕ್ಷೇತ್ರದ ನೂತನ ಆವಿಷ್ಕಾರಗಳು, ತಂತ್ರಜ್ಞಾನವನ್ನು ತಿಳಿದುಕೊಳ್ಳುವ ಕಾರ್ಯಕ್ರಮವಾಗಿ ರೂಪಿಸಲಾಗಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರ ವಿ.ಎನ್. ಪಾಟೀಲ ಹಾಗೂ ಗದಗ ಬೆಟಗೇರಿ ನಗರಸಭೆ ಇಂಜಿನಿಯರ್ ಎಚ್.ಎಂ. ಬಂಡಿವಡ್ಡರ್. ಅಲ್ಟಾಟೆಕ್ ಸಿಮೆಂಟ್‌ನ ಗಿರೀಶ ಸವಣೂರ, ಗೋವಿಂದ ಕೋಲವೇಕರ್, ಮಂಜುನಾಥ ಮಾಯಮ್ಮನವರ, ಸಚಿನ್ ಮಲ್ಲಾಪುರ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ 2023-24ನೆ ಸಾಲಿನ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಅಸೋಸಿಯೇಶನ್ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಲಿದೆ. ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮಲ್ಲಿಕಾರ್ಜುನಗೌಡ ಪಾಟೀಲ ಹಾಗೂ ಇನ್ನಿತರ ಪದಾಧಿಕಾರಿಗಳು ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿ.ಎಚ್. ಡಂಬಳ, ಪಿ.ಎಲ್. ಮಲ್ಲಣ್ಣವರ, ಎಸ್.ಡಿ. ಪಾಟೀಲ, ಪಿ.ಟಿ. ದಾಸಪ್ಪನವರ, ಎಸ್.ಎಂ. ಅಗಡಿ, ಜಯರಾಜ ಮುಳಗುಂದ, ಬಿ.ಯು. ಅಂಗಡಿ, ಎಂ.ಎಸ್. ಗೌಡಪ್ಪಗೌಡ ಇತರರು ಉಪಸ್ಥಿತರಿದ್ದರು.

## ಗದಗ-ಬೆಟಗೇರಿ ಅವಳಿ ನಗರದಲ್ಲಿ ನೀರು ಪೂರೈಕೆ ಎಲ್ಲೆಲ್ಲಿ?

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದಲ್ಲಿ ಸೆ.14ರಂದು ಈ ಕೆಳಗಿನ ಸ್ಥಳಗಳಲ್ಲಿ ನೀರು ಪೂರೈಕೆಯಾಗಲಿದೆ.

**ಸ್ಥಳಗಳ ವಿವರ:** ವಾರ್ಡ್ ನಂ.5ರಲ್ಲಿ ನರಸಾಪೂರ ಆಶ್ರಯ ಕಾಲೋನಿಯ ಕೆಲವು ಭಾಗಗಳು, ವಾರ್ಡ್ ನಂ 30, 32ರಲ್ಲಿ ವಡ್ಡರಗೇರಿ, ಮೂರಶಿಳ್ಳಿನ ವಕಾರ, 46 ಪ್ಲಾಟ್, ಕುಂಚಿಕೊರವರ ಓಣಿ, ಶಿವಾನಂದ ಗಾರ್ಡನ್ ಲೈನ್, ಬಸವೇಶ್ವರ ಸ್ಕೂಲ್ ಹಿಂದಿನ ಬಾಗ, ಮುಂದಿನ ಭಾಗ, ವಾರ್ಡ್ ನಂ 6, 9, 10ರಲ್ಲಿ ಸಿಹಿನೀರಿನ ಭಾವಿ, ಕಲ್ಮನಿಯವರ ಲೈನ್, ಮುಳಗುಂದ ಅವರ ಲೈನ್, ಮಾನೇದ ಅವರ ಲೈನ್, ಮಲ್ಲಿಕಾರ್ಜುನ ಗುಡಿ ಲೈನ್, ದೇವದಾರ ಲೈನ್, ಕಬಾಡಿ ಅವರ ಲೈನ್, ಅಣ್ಣಿಗೇರಿ ಅವರ ಲೈನ್, ವಾರ್ಡ ನಂ.2ರಲ್ಲಿ ಸೆಟ್ಲ್‌ಮೆಂಟ್ ಉಳಿದ ಭಾಗಗಳಲ್ಲಿ ನೀರು ಸರಬರಾಜಾಗಲಿದೆ.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಅಡೆತಡೆ ಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಲು ಗದಗ-ಬೇಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಚನಾನಂದ ಶ್ರೀಗಳ ಆಗಮನ ಇಂದು

**■ವಿಜಯಸಾಕ್ಷಿ ಸುದ್ದಿ, ಗದಗ**

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರುಗಳಾದ ಶ್ರೀ ವಚನಾನಂದ ಶ್ರೀಗಳು ಗದಗ ನಗರಕ್ಕೆ ಇಂದು ಆಗಮಿಸಲಿದ್ದಾರೆ.



ವಚನಾನಂದ ಶ್ರೀಗಳನ್ನು ಗದಗ ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ವತಿಯಿಂದ ಅದ್ದೂರಿಯಾಗಿ ಬರ ಮಾಡಿ ಕೊಳ್ಳಲಾಗುವುದು ಎಂದು ಪಂಚಮಸಾಲಿ ಮುಖಂಡರು ಹಾಗೂ ಶ್ರೀ ಗುರು ಪುಟ್ಟರಾಜ ಕಲಾ ಪೋಷಕರ ಸಂಘದ ಅಧ್ಯಕ್ಷ ಎಫ್.ವ್ಹಿ ಮರಿಗೌಡ್ರ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ. ಗದಗ-ಬೆಟಗೇರಿ ಅವಳಿ ನಗರದ ವಾರ್ಡ್ ನಂ.23ರ ಒಕ್ಕಲಗೇರಿ ಓಣಿಯ ರಾಚೋಟೇಶ್ವರ ದೇವಸ್ಥಾನ ದಲ್ಲಿ ನಡೆಯಲಿರುವ ವೀರಶೈವ ನಲವತ್ವಾಡ ಮಠದ ಪುರಾಣ ಪ್ರವಚನ ಕಾರ್ಯಕ್ರಮಕ್ಕೆ ಶ್ರೀಗಳು ಆಗಮಿಸಲಿದ್ದಾರೆ.

ಸತತ ಒಂದು ತಿಂಗಳಿನಿಂದ ಕಲ್ಲಿಗನೂರು ಶಾಸ್ತ್ರಿಗಳಿಂದ ಪುರಾಣ ಪ್ರವಚನ ನಡೆಯುತ್ತಿದ್ದು, ಪ್ರತಿದಿನ ನೂರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಪುರಾಣ ಪ್ರವಚನವನ್ನು ಆಲಿಸುತ್ತಿದ್ದಾರೆ.

ಇದೇ ವೇಳೆ ಪಂಚಮಸಾಲಿ ಹಿರಿಯ ರೈತ ಮುಖಂಡ ಮುರಗೆಪ್ಪ ಕೊರಗಲ್ ಅವರ ಜನ್ಮದಿನದ ನಿಮಿತ್ತ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

## ತಾಲೂಕಾ ಮಟ್ಟದ ದಸರಾ ಕ್ರೀಡಾಕೂಟ ಇಂದು

**■ವಿಜಯಸಾಕ್ಷಿ ಸುದ್ದಿ, ರೋಣ**

ತಾಲೂಕಾ ಮಟ್ಟದ ದಸರಾ ಕ್ರೀಡಾಕೂಟವು ಸೆ.14ರಂದು ಬೆಳಿಗ್ಗೆ 9ಕ್ಕೆ ದ್ರೋಣಾಚಾರ್ಯ ತಾಲೂಕಾ ಕ್ರೀಡಾಂಗಣದಲ್ಲಿ ನಡೆಯಲಿದೆ. ಶಾಸಕ ಜಿ.ಎಸ್ ಪಾಟೀಲರು ದಸರಾ ಕ್ರೀಡಾಕೂಟವನ್ನು ಉದ್ಘಾಟಿಸಲಿದ್ದು, ತಾಲೂಕಾ ಮಟ್ಟದ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿರುವರೆಂದು ತಾಲೂಕಾಧಿಕಾರಿ ಜಗದೀಶ ಬೂದಿಹಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 'ವಚನ ಶ್ರಾವಣ-2023' ಮಂಗಲೋತ್ಸವ ಇಂದು

**■ವಿಜಯಸಾಕ್ಷಿ ಸುದ್ದಿ, ಗದಗ**

'ವಚನ ಶ್ರಾವಣ-2023' ಕಾರ್ಯಕ್ರಮದ ಮಂಗಲೋತ್ಸವವು ಗುರುವಾರ ಸಂಜೆ 5.30ಕ್ಕೆ ಶರಣ ಶೇಖಣ್ಣ ಎಂ.ಕವಳಿಕಾಯಿ, 'ಸಂಕಲ್ಪ' 4ನೇ ಅಡ್ಡ ರಸ್ತೆ, ಸೆಕ್ಯೂರ್ ಆಸ್ಪತ್ರೆ ಹತ್ತಿರ, ವಿವೇಕಾನಂದ ಮುಖ್ಯ ರಸ್ತೆ, ಮಸಾರಿ, ಗದಗ ಇವರ ಮನೆಯಲ್ಲಿ ಏರ್ಪಡಿಸಲಾಗಿದೆ.



ಸಾನ್ನಿಧ್ಯವನ್ನು ಶ್ರೀ ಮನ್ನಿರಂಜನ ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಎಡೆಯೂರು ಶ್ರೀ ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ ಇವರು ವಹಿಸುವರು.

ಅಧ್ಯಕ್ಷತೆಯನ್ನು ಬಸವದಳದ ಅಧ್ಯಕ್ಷರಾದ ಶರಣ ವ್ಹಿ.ಕೆ ಕರೆಗೌಡ್ರ ವಹಿಸುವರು. ಗದುಗಿನ ಅನುಭಾವಿಗಳಾದ ಶರಣ ಅಶೋಕ ಬ.ಬರಗುಂಡಿ ಇವರು ಉಪನ್ಯಾಸ ಮಾಡುವರು. ಅತಿಥಿಗಳಾಗಿ ಗದಗ ಬಸವಕೇಂದ್ರದ ಅಧ್ಯಕ್ಷ ಕೆ.ಎಸ್ ಚೆಟ್ಟಿ, ಹಾಗೂ ಲಿಂಗಾಯತ ಪ್ರಗತಿಶೀಲ ಸಂಘ ಗದಗ ಅಧ್ಯಕ್ಷ ಶೇಖಣ್ಣ ಎಸ್.ಕಳಸಾಪೂರಶೆಟ್ರ ಇವರುಗಳು ಆಗಮಿಸುವರು.

ಶರಣ ಶಂಕ್ರಣ್ಣ ಅಂದಪ್ಪ ಸೋಮಗೊಂಡ, ಶರಣ ಗಣೇಶ ಬಡಿಗಣ್ಣವರ, ಶರಣ ಅರುಣ ಆಲತಗಿ, ಶರಣ ಅಭಿಷೇಕ ಬಡಿಗಣ್ಣವರ, ಶರಣೆ ರೇಣುಕಾ ವಿ.ಕರೇಗೌಡ್ರ ಹಾಗೂ ಶರಣ ಸಿ.ಆರ್ ಗಡಾದ ದಂಪತಿಗಳನ್ನು ಸನ್ಮಾನಿಸಲಾಗುವುದು.

ಕಾರಣ ಬಸವದಳ, ಬಸವಕೇಂದ್ರ ಹಾಗೂ ಲಿಂಗಾಯತ ಪ್ರಗತಿಶೀಲ ಸಂಘ, ಗದಗ ತಾಲೂಕ ಶರಣ ಸಾಹಿತ್ಯ ಪರಿಷತ್ತ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

## ಅಲ್ಪಸಂಖ್ಯಾತರ ಪತ್ರಿಕೆಗಳಿಗೆ ಜಾಹೀರಾತು ನೀಡಲು ಮನವಿ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಮಾಧ್ಯಮ ಪಟ್ಟಿಯಲ್ಲಿರುವ ಅಲ್ಪಸಂಖ್ಯಾತರ ಪತ್ರಿಕೆಗಳಿಗೆ ಪ್ರತಿ ತಿಂಗಳು ಎರಡು ಪುಟ ವಿಶೇಷ ಜಾಹೀರಾತು ಬಿಡುಗಡೆ ಹಾಗೂ ಮಾನ್ಯತೆ ಪಡೆದ ಅಧಿಕೃತ ಅಲ್ಪಸಂಖ್ಯಾತ ಪತ್ರಕರ್ತರಿಗೆ ಮಾಧ್ಯಮ ಕಿಟ್ ಒದಗಿಸುವ ಸರಕಾರದ ಆದೇಶವನ್ನು ಅನುಷ್ಠಾನಗೊಳಿಸಲು ಒತ್ತಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದ ಮನವಿ ಪತ್ರವನ್ನು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ ಅವರಿಗೆ ಸಲ್ಲಿಸಲಾಯಿತು.



ಬೆಂಗಳೂರು ನಗರದ ಗಾಂಧಿಭವನದಲ್ಲಿ ಬುಧವಾರದಂದು ಭೇಟಿಯಾದ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ದಿನಪತ್ರಿಕೆಗಳ ಸಂಪಾದಕರ ಸಂಘದ ನಿಯೋಗ ಮನವಿ ಪತ್ರ ಸಲ್ಲಿಸಿತು.

**ಕರ್ನಾಟಕ ಸರಕಾರ ಉಲ್ಲೇಖದ ಆದೇಶದಲ್ಲಿ:** ಕರ್ನಾಟಕ ರಾಜ್ಯದಲ್ಲಿ ಮಾನ್ಯತೆ ಪಡೆದ ಅಲ್ಪಸಂಖ್ಯಾತರ (ಮಾಧ್ಯಮ ಪಟ್ಟಿಯಲ್ಲಿರುವ) ಪತ್ರಿಕೆಗಳಿಗೆ ಪ್ರತಿ ತಿಂಗಳು ಎರಡು ಪುಟದ ಜಾಹೀರಾತು ನೀಡುವಂತೆ ದಿನಾಂಕ: 27-02-2018 ರಂದು ಅಂದಿನ ಸರ್ಕಾರವು ಆದೇಶ ಹೊರಡಿಸಿತ್ತು, ಆದರೆ ಈ ಆದೇಶವನ್ನು ಇಂದಿನವರೆಗೂ ಅನುಷ್ಠಾನಕ್ಕೆ ತಂದಿರುವುದಿಲ್ಲ.

ರಾಜ್ಯದಲ್ಲಿ ಅಲ್ಪಸಂಖ್ಯಾತರು ನಡೆಸುತ್ತಿರುವ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳು ತುಂಬಾ ಸಂಕಷ್ಟ ಸ್ಥಿತಿಯಲ್ಲಿದ್ದು, ಈ ಪರಿಸ್ಥಿತಿಯನ್ನು ಅವಲೋಕಿಸಿ ಅಂದಿನ ಕಾಂಗ್ರೆಸ್ ಸರ್ಕಾರವು ಅಲ್ಪಸಂಖ್ಯಾತರ ಒಡೆತನದಲ್ಲಿರುವ ದಿನ ಪತ್ರಿಕೆಗಳಿಗೆ ಪ್ರತಿ ತಿಂಗಳು ಎರಡು ಪುಟಗಳ ಜಾಹೀರಾತು ನೀಡುವಂತೆ ಆದೇಶ ಮಾಡಿತ್ತು. ಆದರೆ ಇದುವರೆಗೂ ಆದೇಶ ಅನುಷ್ಠಾನಕ್ಕೆ ತಂದಿರುವುದಿಲ್ಲ.

ರಾಜ್ಯ ಸರಕಾರ ಈಗಾಗಲೇ ವಿವಿಧ ಸಮುದಾಯಗಳ ಪತ್ರಿಕೆಗಳಗೆ ಪ್ರತಿ ತಿಂಗಳು ಎರಡು ಪುಟದ ಜಾಹೀರಾತು ನೀಡುವ ಆದೇಶ ಹೊರಡಿಸಿದ್ದು, ಅದು ಜಾರಿಯಲ್ಲಿರುತ್ತದೆ. ಆದರೆ ಅಲ್ಪಸಂಖ್ಯಾತರ ಸಮುದಾಯದ ಪತ್ರಿಕೆಗಳಿಗೆ ಮಾತ್ರ ಸರಕಾರದ ಆದೇಶವಿದ್ದರೂ ಸದರಿ ಸೌಲಭ್ಯ ಜಾರಿಯಾಗಿಲ್ಲ.

ಇದೀಗ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಲ್ಪಸಂಖ್ಯಾತರ ದಿನ ಪತ್ರಿಕೆಗಳಿಗೆ ಪ್ರತಿ ತಿಂಗಳು ಎರಡು ಪುಟಗಳ ವಿಶೇಷ ಜಾಹೀರಾತು ನೀಡುವ ಆದೇಶವನ್ನು ಅನುಷ್ಠಾನಗೊಳಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೇಂದ್ರ ಕಚೇರಿಗೆ ಸೂಚನೆ ನೀಡಬೇಕೆಂದು ಕರ್ನಾಟಕ ರಾಜ್ಯ

▸▸3ನೇ ಪುಟಕ್ಕೆ

## ಸಾಕ್ಷಿ ಸುಭಾಷಿತ

ಗರ್ವ, ಕೆಟ್ಟಮಾತು, ಹಠವಾದಿತ್ವ, ಅಹಿತವಾದ ಮಾತುಗಳು ಮತ್ತು ಇತರರು ಹೇಳುವುದನ್ನು ಕೇಳದಿರುವುದು–ಮೂರ್ಖರ ಗುರುತುಗಳು.

–ಸುಭಾಷಿತ

## ಸಂಪಾದಕೀಯ

# ಮೊದಲು ಕಾವೇರಿ ನೀರು ನಿಲ್ಲಿಸಿ

ರಾಜ್ಯದಲ್ಲಿ ಮಳೆ ಕೊರತೆಯಿಂದ ಬರದ ಛಾಯೆ ಆವರಿಸಿದೆ. ನದಿ, ಹಳ್ಳ, ಕೊಳ್ಳಗಳು ನೀರಿಲ್ಲದೆ ಬರಿದಾಗಿದೆ. ಜಲರಾಶಿಯಿಂದ ತುಂಬಿ ತುಳುಕಬೇಕಿದ್ದ ಅಣೆಕಟ್ಟುಗಳು ಭರ್ತಿಯಾಗುತ್ತಿಲ್ಲ. ಆದರೂ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಲಾಗುತ್ತಿದೆ.

ಕಾವೇರಿ ನದಿ ನೀರು ನಿರ್ವಹಣೆಯ ಸಮಿತಿ ಸೂಚನೆ ಮೇರೆಗೆ ರಾಜ್ಯ ಸರ್ಕಾರ ಸಾವಿರಾರು ಕ್ಯೂಸೆಕ್ ನೀರು ಹರಿಸಿದೆ. ತಮಿಳುನಾಡಿಗೆ ನೀರು ಬಿಡುವುದಿಲ್ಲ ಎನ್ನುತ್ತಲೆ 15 ದಿನಗಳಿಂದ ನಿರಂತರವಾಗಿ ನೀರು ಬಿಡಲಾಗುತ್ತಿದೆ.

ಕಾವೇರಿ ನದಿ ಪಾತ್ರದ ರೈತರ ಆಕ್ರೋಶ ವ್ಯಕ್ತವಾಗುತ್ತಿದ್ದರು ರಾಜ್ಯ ಸರ್ಕಾರ ತಕ್ಷಣಕ್ಕೆ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ. ಮಳೆಯಾದರೆ ಸಾಮಾನ್ಯವಾಗಿ ಬಿಡಬೇಕಾದ ನೀರನ್ನ ರಾಜ್ಯ ಸರ್ಕಾರ ಹಿಡಿದಿಡಲು ಸಾಧ್ಯವೂ ಇಲ್ಲ.

ಆದರೆ ಅಣೆಕಟ್ಟು ಬರ್ತಿಯಾಗದೆ ಇದ್ದಾಗಲೂ ತಮಿಳುನಾಡಿಗೆ ನೀರು ಹರಿಸುವುದು ಯಾವ ನ್ಯಾಯ. ಸಾವಿರಾರು ಕ್ಯೂಸೆಕ್ ನೀರು ಹರಿದ ಮೇಲೆ ಸರ್ವಪಕ್ಷಗಳ ಸಭೆ ನಡೆಸುವ ಉದ್ದೇಶವಾದರೆ ಏನು?

ರಾಜ್ಯ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇದ್ದಿದ್ದರೆ, ನೀರು ಹರಿಸುವುದನ್ನು ನಿಲ್ಲಿಸಿ ಸರ್ವ ಪಕ್ಷಗಳ ಸಭೆಯನ್ನ ಕರೆಯಬೇಕಿತ್ತು. ಆದರೆ ರಾಜ್ಯ ಸರಕಾರ ವಿಳಂಬ ಧೋರಣೆಯನ್ನ ಅನುಸರಿಸಿದ್ದರಿಂದ ಕಾವೇರಿ ನದಿ ನೀರು ಭಾಗಶಃ ತಮಿಳುನಾಡಿಗೆ ಹರಿದು ಹೋಗಿದೆ.

ಸರ್ವ ಪಕ್ಷಗಳ ಸಭೆ ನಡೆಯುವಾಗಲು ನದಿ ನೀರು ಹರಿಯುತ್ತಿರುವುದು ರಾಜ್ಯ ಸರ್ಕಾರದ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಭವಿಷ್ಯದ ಪರಿಣಾಮ ಏನೇ ಇರಲಿ, ಕಾನೂನು ತೊಡಕುಗಳು ಎದುರಾಗಲಿ. ನೀರು ಹಿಡಿದಿಟ್ಟುಕೊಂಡು ಅವುಗಳನ್ನ ಎದುರಿಸುವ, ಅವುಗಳನ್ನು ಪರಿಹರಿಸುವ ಕೆಲಸಕ್ಕೆ ರಾಜ್ಯ ಸರ್ಕಾರ ಮುಂದಾಗಬೇಕು.

ಇಲ್ಲದಿದ್ದರೆ ಕುಡಿಯುವ ನೀರಿಗೂ ಬರ ಅನುಭವಿಸುವ ಕಾಲ ಕೆಲವೇ ದಿನಗಳಲ್ಲಿ ಕಾಣಬಹುದು.

## ಕದಳಿಶ್ರೀ ವೇದಿಕೆಯಿಂದ 'ಅಮೃತ ಭೋಜನ-ಜ್ಞಾನಸಿಂಚನ', ಕಲಿಕಾ ಸಾಮಗ್ರಿ ವಿತರಣೆ

# ಶರಣರ ವಚನಗಳು ನಿತ್ಯ ದಾರಿದೀಪ





■ವಿಜಯಸಾಕ್ಷಿ ಸುದ್ದಿ, ಗದಗ

ವಚನಗಳು ನಮ್ಮ ಶರಣರ ಅನುಭಾವದ ಅಕ್ಷರರೂಪ, ದಿವ್ಯ ಪಥದಲ್ಲಿ ಸಾಗಲು ನಮಗೆ ಇವು ನಿತ್ಯ ದಾರಿದೀಪ. ಶರಣರು ವಚನ ಸಾಹಿತ್ಯದ ಮೂಲಕ ನಮ್ಮಲ್ಲಿ ಅರಿವಿನ ಹಣತೆ ಬೆಳಗಿದ ಪುಣ್ಯ ಪುರುಷರು ಎಂದು ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ ಹೇಳಿದರು.

ಅವರು ಮಂಗಳವಾರ ಗದಗ ಜಿಲ್ಲಾ ಅಕ್ಕಮಹಾದೇವಿ ಕದಳಿಶ್ರೀ ವೇದಿಕೆ, ಗದುಗಿನ ಸರ್ಕಾರಿ ಪ್ರಾಥಮಿಕ ಶಾಲೆ ನಂ.2ರಲ್ಲಿ ಏರ್ಪಡಿಸಿದ್ದ 'ಅಮೃತ ಭೋಜನ ಜ್ಞಾನಸಿಂಚನ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅತಿಥಿಗಳಾಗಿ ಆಗಮಿಸಿದ್ದ ಹಿರಿಯರಾದ ಗುರಯ್ಯ ಹಿರೇಮಠ ಮಾತನಾಡಿ, ಮಕ್ಕಳು ಬಾಲ್ಯದಲ್ಲಿಯೇ ಉತ್ತಮ ಹವ್ಯಾಸಗಳನ್ನು, ನೈತಿಕ ಮೌಲ್ಯಗಳನ್ನು, ಮಾನವೀಯತೆಯ ಗುಣಗಳನ್ನು ರೂಢಿಸಿಕೊಳ್ಳಬೇಕು. ಇದಕ್ಕೆ ಪೂರಕವಾಗಿ ಶರಣರ ವಾಣಿಗಳನ್ನು ಓದಿ ಅರ್ಥೈಸಿಕೊಳ್ಳಬೇಕೆಂದರು.

ಸಂಪನ್ಮೂಲ ವ್ಯಕ್ತಿ ಪ್ರಕಾಶ ಮಂಗಳೂರ ಮಾತನಾಡಿ, ಶರಣರ ವಚನಗಳ ಅಧ್ಯಯನದಿಂದ ಶರಣರು ನಿಂತ ನೆಲೆ, ಏರಿದ ಎತ್ತರ, ಅವರ ಅನುಭವದ ಆಳವನ್ನು ನಾವು ತಿಳಿದುಕೊಳ್ಳಬಹುದು. ಮಕ್ಕಳು ಹಿರಿಯರ ಸಹಾಯದಿಂದ ಶರಣರ ವಾಣಿಗಳನ್ನು, ಗಾದೆ ಮಾತುಗಳನ್ನು ಕೇಳಿ, ತಿಳಿದು ಅರ್ಥೈಸಿಕೊಳ್ಳಬೇಕೆಂದರು.

ಪ್ರಾಸ್ತಾವಿಕವಾಗಿ ಚಿಂತಕಿ ಲಲಿತಾ ಉಮನಾಬಾದಿ ಮಾತನಾಡಿ, ಸರ್ಕಾರಿ ಶಾಲೆಗಳ ಮಕ್ಕಳಿಗೆ ಸಿಹಿ ಭೋಜನದೊಂದಿಗೆ ಕಲಿಕಾ ಸಾಮಗ್ರಿಗಳನ್ನು ವಿತರಿಸುವ ಕಾರ್ಯ ವೇದಿಕೆಯಿಂದ ಪ್ರತಿ ವರ್ಷ ನಡೆದುಕೊಂಡು ಬರುತ್ತಿದೆ. ಇದಕ್ಕೆಲ್ಲ ದಾನಿಗಳ ಸಹಾಯ-ಸಹಕಾರ ಕಾರಣವಾಗಿದೆ ಎಂದರು.

ಪ್ರಾರಂಭದಲ್ಲಿ ಗಾಯಕಿ ಪದ್ಮಾ ಕಬಾಡಿ ಹಾಗೂ ರಂಜನಾ ಕೋಟಿ ವಚನ ಪ್ರಾರ್ಥನೆಗೈದರು. ಶ್ರೇಯಾ ಕಾರಟಗಿ, ಸಂಗೀತಾ ಮೆಣಸಗಿ, ತೇಜಸ್ವಿನಿ ಚಳ್ಳಮರದ, ಗೌರಮ್ಮ ತಳಿಗ್ಯಾಳ ಶರಣ-ಶರಣೆಯರ ವಚನಗಳನ್ನು ಪ್ರಸ್ತುತಪಡಿಸಿದರು. ಮುಖ್ಯೋಪಾಧ್ಯಾಯೆ ಎಫ್.ಜೆ ದಲಭಂಜನ್ ಸ್ವಾಗತಿಸಿದರು. ವಿ.ಕೆ ಪಾಟೀಲ ಪರಿಚಯಿಸಿದರು.

ಬಾಲ್ಯದಲ್ಲಿ ಮಕ್ಕಳು ನಿಷ್ಠೆಯಿಂದ ಓದು-ಬರಹದಲ್ಲಿ ತೊಡಗಬೇಕು. ಉತ್ತಮ ಸಂಸ್ಕಾರ ಹೊಂದಲು ಶರಣರ ಜೀವನಾಮೃತವನ್ನು ತಿಳಿಯಬೇಕು. ಶಿಕ್ಷಣದ ಮೂಲಕ ಉನ್ನತವಾದ ಹುದ್ದೆಯನ್ನು ಪಡೆಯಲು ಮುಂದಾಗಬೇಕು ಎಂದು ಆರ್.ಎಸ್ ಬುರಡಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ವಿ.ಎಸ್ ಕಬ್ಬರಗಿ ನಿರೂಪಿಸಿದರು. ಎಸ್.ವಿ ಇಂದ್ರಾ ನಿರ್ವಹಿಸಿದರು. ಪಿ.ಎಸ್ ನಾಗನೂರ ವಂದಿಸಿದರು.

ಕಾರ್ಯಕ್ರಮದಲ್ಲಿ ದೀಪಾ ಬೆಟಗೇರಿ, ರತ್ನಾ ಸೋಮನಕಟ್ಟಿ, ಜಯಶ್ರೀ ಕುಕನೂರ, ಸಂಗೀತಾ ಬದಿ, ಪಾಲಕರು-ಪೋಷಕರು ಪಾಲ್ಗೊಂಡಿದ್ದರು.

# ಬೂದಗುಂಪಾ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ



ತಾಲೂಕಿನ ಬೂದಗುಂಪಾ ಗ್ರಾಮದಲ್ಲಿ 2022-23ನೇ ಸಾಲಿನ ಬೂದಗುಂಪಾ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅದ್ದೂರಿಯಾಗಿ ಜರುಗಿತು. ಕಾರ್ಯಕ್ರಮವನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಲಕ್ಷ್ಮವ್ವ ಮುದುಕಪ್ಪ ಸಂಗಟಿ ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಗೋವಿಂದರಾಜ್ ಬೂದುಗುಂಪಾ ಮಾತನಾಡಿ, ಶಿಕ್ಷಕರಿಗೆ ಹಲವಾರು ಒತ್ತಡಗಳು ಮಧ್ಯೆ ಕೆಲಸ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಿ ಎಲ್ ಓ ಕಾರ್ಯದಿಂದ ಶಿಕ್ಷಕರು ಓಣಿ ಓಣಿಗಳಲ್ಲಿ ಮನೆ ಮನೆಗೆ ತೆರಳಿ ಕಾರ್ಯ ನಿರ್ವಹಿಸುತ್ತಾರೆ. ಶಾಲೆಯಲ್ಲಿ ಅಕ್ಷರ ದಾಸೋಹದ ಉಸ್ತುವಾರಿಯ ಜೊತೆಗೆ ಇನ್ನಿತರ ಅನೇಕ ಇಲಾಖೆ ಕೆಲಸಗಳನ್ನು ನಿರ್ವಹಿಸುತ್ತಾರೆ. ಹೀಗಾಗಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಲು ಸಾಧ್ಯವಾಗುತ್ತಿಲ್ಲ ಇದು ತುಂಬಾ ಬೇಸರದ ಸಂಗತಿಯಾಗಿದೆ ಎಂದರು. ಮಕ್ಕಳಲ್ಲಿರುವ ಅನೇಕ ಪ್ರತಿಭೆಗಳನ್ನು ಪ್ರದರ್ಶಿಸುವ ಈ ವೇದಿಕೆಯಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ಶರಣಪ್ಪ ಗುತ್ತೂರ್, ಸದಸ್ಯರಾದ ಪಕೀರಪ್ಪ ದೊಡ್ಡಮನಿ, ಆದಪ್ಪ ಕುಂಬಾರ್. ರಾಮಣ್ಣ ಅಂಜಿನಳ್ಳಿ. ಸೀಮಣ್ಣ ಗಬ್ಬುರ್ ಯಮನೂರು ಸ್ವಾಮಿ. ಮಂಜುನಾಥ್ ದಾಸರ್. ಎಸ್ ಡಿ ಎಂ ಸಿ ಉಪಾಧ್ಯಕ್ಷರಾದ ಮಾರುತಿ ವಾಲ್ಮೀಕಿ, ಕರಿಯಣ್ಣ ಸಂಗಟಿ, ಬೆಟ್ಟದಪ್ಪ ಕಲರ್ ಮಂಜುನಾಥ್ ಚನ್ನ ದಾಸರ್, ಮಧುಕೇಶ್ವರ ಕರಿಯಣ್ಣ ಇಂದ್ರಿಗಿ ಕರಿಯಣ್ಣ ಕುದುರಿಮೋತಿ ಪುಷ್ಪ ಹಿರೇಮಠ, ರಂಗನಾಥ, ಶ್ರೀದೇವಿ ವೆಂಕಟೇಶ್, ಆಲಿಯಬೇಗಂ ಭಾಗವಹಿಸಿದ್ದರು.

ಪಕೀರಪ್ಪ ಎಮ್ಮಿ, ಎ.ವಿ ಗುರುರಾಜ್, ಮಂಜುನಾಥ ಜೀನಿನ್ ಅನೇಕ ಗಣ್ಯರು ಉಪಸ್ಥಿತರಿದ್ದರು. ಇಲಾಖೆಯ ಪರವಾಗಿ ಶಿಕ್ಷಣ ಸಂಯೋಜಕರಾದ ಮಹಾಂತೇಶ್ ಕೆ .ಮತ್ತು ಸಂಜೀವ ಟಿ ಕೆ ಸಿ.ಆರ್.ಪಿ ಭಾಗವಹಿಸಿದ್ದರು. ಶಾಲೆಯ ಮುಖ್ಯೋಪಾಧ್ಯಾಯರಾದ ರಾಮಣ್ಣ ಶಾವಿ ಪ್ರಾಸ್ತವಿಕವಾಗಿ ಮಾತನಾಡಿದರು. ಪ್ರಕಾಶ್ ಎಸ್ ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀಮತಿ ವಾಣಿಶ್ರೀ ಕುಲಕರ್ಣಿ ವಂದಿಸಿದರು.

# ಬಸವೇಶ್ವರ ರಥೋತ್ಸವದಂಗವಾಗಿ ಅನ್ನ ಸಂತರ್ಪಣೆ

■ವಿಜಯಸಾಕ್ಷಿ ಸುದ್ದಿ, ಗದಗ



ತಾಲೂಕಿನ ಹರ್ತಿ ಗ್ರಾಮದಲ್ಲಿ ಸೋಮವಾರ ಬಸವೇಶ್ವರ ದೇವರ ರಥೋತ್ಸವದ ನಿಮಿತ್ತ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದ ಪೂಜ್ಯ ಶ್ರೀ ಅಭಿನವ ಬೂದೀಶ್ವರ ಮಹಾಸ್ವಾಮಿಗಳು ಅನ್ನಸಂತರ್ಪಣೆಗೆ ಚಾಲನೆ ನೀಡಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಶಾಸಕ ಡಿ.ಆರ್ ಪಾಟೀಲ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಎಂ.ಆರ್ ಪಾಟೀಲ, ರವಿ ಮೂಲಿಮನಿ, ಎ.ಎಸ್ ಕೊಟ್ರಶೆಟ್ಟರ್, ಬಿ.ಎ ಸೋಮರಡ್ಡಿ, ಎಸ್.ಡಿ ನೇರಲಿ, ದೊಡ್ಡಯ್ಯ ಹುಚ್ಚಪ್ಪನಮಠ, ಬಿ.ಬಿ ಹೊನ್ನಪ್ಪನವರ, ಮಲ್ಲನಗೌಡ ಪಾಟೀಲ, ಶಂಕ್ರಪ್ಪ ಭಜಂತ್ರಿ, ಪಿ.ಎಸ್ ಪಾಟೀಲ, ಜಿ.ಕೆ ಸೋಮರಡ್ಡಿ, ಸಿ.ವ್ಹಿ ಪಾಟೀಲ, ಹನಮಂತ ಬಂಡಿವಡ್ಡರ, ಗಂಗಪ್ಪ ಭಾಗಪೂರ, ಗುಳಪ್ಪ ಗುಡದೂರ, ಸೋಮರಡ್ಡಿ, ಮಹೇಶ ಪಟ್ಟಣಶೆಟ್ಟಿ, ಯಲ್ಲಪ್ಪ ತಿಪ್ಪಣ್ಣವರ, ನಿಂಗಪ್ಪ ಚಲವಾದಿ, ಈರಪ್ಪ ಹೊನ್ನಪ್ಪನವರ, ಎಂ.ಎಂ ಸೋಮರಡ್ಡಿ, ಎಂ.ಪಿ ಕುರ್ತಕೋಟಿ, ಸಿದ್ದಪ್ಪ ಜೋಂಡಿ, ಅಶೋಕ ಬಡಿಗೇರ, ಉಮೇಶ ಬಿಜರಡ್ಡಿ, ಪ್ರಭು ಹುಡೇದ, ಬಸವರಾಜ ಯಳವತ್ತಿ, ವ್ಹಿ.ಪಿ ಹುಡೇದ, ಅಪ್ಪಣ್ಣ ಭಂಗಿ, ಬೋಜರಾಜ ನಾವಲ್ಲಿ, ಅಮರ ಕುರ್ತಕೋಟಿ, ಬಸಯ್ಯ ಕವಲೂರ, ಎಮ್.ಬಿ ಪಾಟೀಲ, ಫಕ್ಕೀರಯ್ಯ ನಿಂಗಪ್ಪ ಹಡಪದ, ಎನ್.ಡಿ ಪಾಟೀಲ, ಶಿವಪ್ಪ ಹುಡೇದ, ಸಂಗಪ್ಪ ಪೂಜಾರ, ಹರ್ತಿ ಗ್ರಾ.ಪಂ ಅಧ್ಯಕ್ಷರಾದ ದೇವಕ್ಕ ಅಸುಂಡಿ, ಉಪಾಧ್ಯಕ್ಷೆ ರೇಣವ್ವ ತಳವಾರ, ಸದಸ್ಯರಾದ ಸೋಮರಡ್ಡಿ ನಡವೂರ, ಪಾರ್ವತವ್ವ ಕುರ್ತಕೋಟಿ, ಚನ್ನಬಸನಗೌಡ ಪಾಟೀಲ, ಮಹೇಶ ಪಟ್ಟಣಶೆಟ್ಟಿ, ಯಲ್ಲಪ್ಪ ತಿಪ್ಪಣ್ಣವರ, ಫಕ್ಕೀರಯ್ಯ ಮರಿದೇವರಮಠ, ಪ್ರಕಾಶ ಕುರ್ತಕೋಟಿ, ಕೃಷ್ಣ ನಾಗರ್ಲೋಟಿ, ಗಂಗಪ್ಪ ಗಡಾದ, ಯಲ್ಲಪ್ಪ ಕೋರಿ, ನೀಲವ್ವ ಡಂಬಳ, ನೀತಾ ಸಂಶಿ, ಶಾರದಾ ಭಜಂತ್ರಿ, ಕಸ್ತೂರೆವ್ವ ಬಂಡಿವಡ್ಡರ್, ಹಾಲವ್ವ ಕುರಿ, ಮಹಾದೇವಿ ಬಳಿಗೇರ ಸೇರಿದಂತೆ ಹರ್ತಿ ಗ್ರಾಮದ ಗುರು-ಹಿರಿಯರು, ಭಕ್ತಾದಿಗಳು ಪಾಲ್ಗೊಂಡು ಶ್ರೀದೇವರ ಕೃಪೆಗೆ ಪಾತ್ರರಾದರು.

# ಟ್ರಾಫಿಕ್ ತಗ್ಗಿಸಲು ಶಾಲೆ, ಕೈಗಾರಿಕೆಗಳ ಸಮಯ ಬದಲಾವಣೆಗೆ ಸರ್ಕಾರಕ್ಕೆ ಹೈಕೋರ್ಟ್ ಸಲಹೆ!

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬೆಂಗಳೂರು ಮಹಾನಗರದಲ್ಲಿ ದಿನನಿತ್ಯ ಉಂಟಾಗುತ್ತಿರುವ ವಾಹನ ದಟ್ಟಣೆ ತಪ್ಪಿಸಲು ಶಾಲೆಗಳು ಮತ್ತು ಕೈಗಾರಿಕೆಗಳ ಕಾರ್ಯನಿರ್ವಹಣೆ ಸಮಯ ಬದಲಾವಣೆ ಮಾಡಬೇಕು ಎಂದು ಸರ್ಕಾರಕ್ಕೆ ಹೈಕೋರ್ಟ್ ಸಲಹೆ ನೀಡಿದೆ.

ಈ ಸಂಬಂಧ ಶಾಲೆಗಳು, ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು ಮತ್ತು ಕಂಪನಿಗಳ ಪ್ರತಿನಿಧಿಗಳು ಸೇರಿದಂತೆ ಸಂಬಂಧಿಸಿದ ಪಾಲುದಾರರ ಸಭೆ ಕರೆದು ಚರ್ಚೆ ನಡೆಸುವಂತೆ ನ್ಯಾಯಾಲಯ ತಾಕೀತು ಮಾಡಿದೆ.

# ಪ್ರಾಥಮಿಕ ಶಾಲಾ ಮಕ್ಕಳಿಗೆ ಸಮವಸ್ತ್ರ, ಶೂ ವಿತರಿಸಿ

■ವಿಜಯಸಾಕ್ಷಿ ಸುದ್ದಿ, ಗದಗ



ಕರ್ನಾಟಕ ಸರ್ಕಾರದಿಂದ ಈಗಾಗಲೇ ರಾಜ್ಯದ ವಿವಿಧ ಜಿಲ್ಲೆಗಳಿಗೆ ಪ್ರಾಥಮಿಕ ಶಾಲಾ ಸಮವಸ್ತ್ರ ಹಾಗೂ ಶೂಗಳ ಹಂಚಿಕೆಯಲ್ಲಿ ವಿಳಂಬವಾಗಿದೆ. ಈ ಕಾರ್ಯವನ್ನು ಶೀಘ್ರವೇ ಪೂರ್ಣಗೊಳಿಸಿ ಎಂದು ಜಯ ಕರ್ನಾಟಕ ಜನಪರ ವೇದಿಕೆಯ ರಾಜ್ಯ ಉಪಾಧ್ಯಕ್ಷ ಹಾಲಪ್ಪ ಈ ವರವಿ ಪತ್ರಿಕಾ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಕರ್ನಾಟಕ ಸರ್ಕಾರದಿಂದ ಹಣ ಬಿಡುಗಡೆಯಾದರೂ ಸಮವಸ್ತ್ರ ಮತ್ತು ಶೂಗಳನ್ನು ವಿತರಿಸುವಲ್ಲಿ ಪ್ರಾಥಮಿಕ ಶಾಲಾ ಸಿಬ್ಬಂದಿಗಳು ಮತ್ತು ಸಂಬಂಧಿಸಿದ ಅಧಿಕಾರಿಗಳು ನಿರ್ಲಕ್ಷ್ಯ ತಾಳಿದ್ದಾರೆ. ಶಾಲೆ ಪ್ರಾರಂಭವಾಗಿ ಮೂರುವರೆ ತಿಂಗಳು ಕಳೆದರೂ ಮಕ್ಕಳಿಗೆ ಸಮವಸ್ತ್ರ ನೀಡದಿರುವುದು ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಿದೆ.

ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಸೂಕ್ತ ವಿಚಾರಣೆ ನಡೆಸಿ, ಇದುವರೆಗೂ ವಿತರಣೆಯಾಗದ ಶಾಲೆಗಳನ್ನು ಗುರುತಿಸಿ, ಸಮವಸ್ತ್ರ, ಶೂಗಳನ್ನು ಒದಗಿಸಬೇಕೆಂದು ಆಗ್ರಹಿಸಿದ್ದಾರೆ.

# ಛಲವಾದಿ ಸಮುದಾಯಕ್ಕೆ ರಾಜಕಿಯ ಪ್ರಾತಿನಿಧ್ಯ ದೊರೆತಿಲ್ಲ

■ವಿಜಯಸಾಕ್ಷಿ ಸುದ್ದಿ, ಗದಗ



ಗದಗ ಜಿಲ್ಲೆಯಲ್ಲಿ ರಾಜಕೀಯ ಅಧಿಕಾರಗಳು ಛಲವಾದಿ ಸಮುದಾಯಕ್ಕೆ ದೊರೆತಿಲ್ಲ. ಪ್ರಾತಿನಿಧ್ಯ ಕೊರತೆಯಿಂದ ಛಲವಾದಿ ಸಮಾಜದ ಅಭಿವೃದ್ಧಿಗೆ ಕುಂಠಿತವಾಗುತ್ತದೆ ಎಂದು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಗದಗ ಜಿಲ್ಲಾಧ್ಯಕ್ಷ ಎಲ್ ನಾರಾಯಣಸ್ವಾಮಿ ಹೇಳಿದರು.

ಇತ್ತೀಚೆಗೆ ಗದಗ ಪ್ರವಾಸಿ ಮಂದಿರದಲ್ಲಿ ಏರ್ಪಡಿಸಿದ್ದ ಛಲವಾದಿ ಜನಾಂಗದ 'ಸ್ವಾಭಿಮಾನದ ಸಮಾವೇಶ'ದ ಪೂರ್ವಭಾಸಿ ಸಭೆಯಲ್ಲಿ ಮಾತನಾಡಿ, ಸಮಾಜದಲ್ಲಿ ಜಾಗೃತಿ ಮೂಡಿಸಿ ಧಾರ್ಮಿಕ, ಆರ್ಥಿಕ ಶೈಕ್ಷಣಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಮುಖ್ಯವಾಹಿನಿಗೆ ತರುವಲ್ಲಿ ಸ್ವಾಭಿಮಾನಿ ಸಮಾವೇಶ ಅವಶ್ಯವಾಗಿದೆ ಎಂದರು.

ಮಹಾಸಭಾದ ಹಿರಿಯರಾದ ಚಂದ್ರಶೇಖರ ಕಾಳೆ, ಬಸವರಾಜ ಈರಣ್ಣವರ, ರಮೇಶ ಕಡಿ, ಪತ್ರಿಕಾ ಸಂಪಾದಕ ಮಹಾಂತೇಶ ಮದ್ನೂರ, ಮಹಿಳಾ ಘಟಕದ ವಿಜಯಲಕ್ಷ್ಮೀ ಛಲವಾದಿ, ಸಭೆಯ ಅಧ್ಯಕ್ಷತೆ ವಹಿಸಿದ್ದ ರವಿ ಕರಬಸಣ್ಣವರ ಮುಂತಾದವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಎಸ್. ಎನ್ ಲಿಂಗದಾಳ, ನಾಗರಾಜ ಹುಣಸಿಮರದ, ಬಸವರಾಜ ಸಿಂಗಾಡಿ, ಮನೋಹರ ಸಿಂಗಾಡಿ ಮುಂತಾದವರು ಉಪಸ್ಥಿತರಿದ್ದರು.

# ಬಸವಾದಿ ಶರಣರ ವಚನಗಳು ಬದುಕಿಗೆ ಆದರ್ಶ

■ವಿಜಯಸಾಕ್ಷಿ ಸುದ್ದಿ, ಗದಗ



ಬಸವಾದಿ ಶರಣರ ವಚನ ಚಿಂತನೆಗಳು ಬದುಕಿಗೆ ಅಪರೂಪದ ಭಕ್ತಿ ಮತ್ತು ಶಕ್ತಿಯಾಗಿದೆ. ಮಹಾತ್ಮರ ವಚನ ಚಿಂತನೆಗಳು ಪ್ರತಿಯೊಬ್ಬರ ಬದುಕಿಗೆ ಶ್ರೇಷ್ಠ ವಚನಗಳಾಗಿವೆ ಎಂದು ಡಾ. ರಮೇಶ್ ಕಲ್ಲನಗೌಡ್ರ ಹೇಳಿದರು.

ಅವರು ವಿವೇಕಾನಂದ ನಗರದ ಶರಣ ರವೀಂದ್ರಗೌಡ ಕಲ್ಲನಗೌಡ್ರ ಅವರ ನಿವಾಸದಲ್ಲಿ ನಡೆದ ವಚನ ಶ್ರಾವಣದ 26ನೇ ದಿನದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಶರಣ ಮನಸಂದ ಮಾರಿತಂದೆ ಅವರು ಬರೆದಿರುವ ವಚನ ಚಿಂತನೆಯ ಕುರಿತು ಡಾ. ಶರಣಬಸವ ವೆಂಕಟಾಪುರ ಮತ್ತು ಮಂಜುಳಾ ಹಾಸಲಕರ ಮಾತನಾಡಿದರು. ಸಭೆಯಲ್ಲಿ ಪೂಜ್ಯ ಎಂ. ಕಲ್ಲಿನಾಥ ಶಾಸ್ತ್ರೀಗಳು ಅಡ್ನೂರ, ಡಾ. ಶರಣಬಸವ ವೆಂಕಟಾಪೂರ, ಎನ್.ಎಂ ಪವಾಡಿಗೌಡ್ರ, ವಿ.ಕೆ ಕರೇಗೌಡ್ರ, ರೇಣುಕಾ ಹಾಸಲಕರ, ಗಂಗಮ್ಮ ಹೂಗಾರ, ಸಿ.ಆರ್ ಗಡಾದ, ಚನ್ನಬಸಪ್ಪ ಅಂಗಡಿ, ಸೋಮಶೇಖರ ಪುರಾಣಿಕ, ರಾಮಣ್ಣ ಕಳ್ಳಿಮನಿ, ಗಿರಿಜಾ ಹಿರೇಮಠ, ಸಹನಾ ಆಲತಗಿ, ಸಾವಿತ್ರಿ ಡಂಬಳ, ಎಸ್.ಟಿ ಪುರಾಣಿಕ, ಲೀಲಾವತಿ ಪುರಾಣಿಕ, ರವೀಂದ್ರ ಕಲ್ಲನಗೌಡ್ರ, ವಿಶಾಲಾಕ್ಷಿ ಕಲ್ಲನಗೌಡ್ರ, ರಂಗನಾಥಗೌಡ ಕಲ್ಲನಗೌಡ್ರ, ಸಂಗನಗೌಡ ಕಲ್ಲನಗೌಡ್ರ, ವೀರಮ್ಮ ಕಲ್ಲನಗೌಡ್ರ, ಚಂದ್ರಗೌಡ ಕಲ್ಲನಗೌಡ್ರ, ಪುಷ್ಪಾ ಕಲ್ಲನಗೌಡ್ರ, ಶಿವಶಂಕರ್ ಕಲ್ಲನಡೌಡ್ರ, ನಾಗಭೂಷಣ ಬಡಿಗಣ್ಣವರ, ಶಕುಂತಲಾ ಗುಡಗೇರಿ, ಎಸ್. ಆರ್ ಪಾಟೀಲ, ಪ್ರಿಯಾಂಕ ತಡಸೂರ, ವಿ.ಸಿ ಪಾಟೀಲ ಮತ್ತು ಕಲ್ಲನಗೌಡ್ರ ಪರಿವಾರದವರು, ಬ ಸ ವಾ ಬಿ ವ ಾ ನಿ ಗ ಳ ು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ವಿಶಾಲಾಕ್ಷಿ ಕಲ್ಲನಗೌಡ್ರ ಸ್ವಾಗತಿಸಿದರು. ಮಂಜುಳಾ ಹಾಸಲಕರ ನಿರೂಪಿಸಿದರು.

## ಮೌನೇಶ ಬಡಿಗೇರ ನಿರ್ದೇಶನದಲ್ಲಿ ಧಾರಾವಾಹಿಗೆ ಮಹೂರ್ತ

# ಗದಗ ಕಲಾವಿದರ 'ಹಂಚಿಕೊಂಡವರು'



■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ಕಲಾವಿದರ ತಂಡದಿಂದ ಚಿನ್ಮಯಗಾಯಿತ್ರಿ ಕ್ರಿಯೇಶನ್ಸ್ ಬ್ಯಾನರ್‌ನಡಿ ನಿರ್ಮಾಣವಾಗುತ್ತಿರುವ 'ಹಂಚಿಕೊಂಡವರು' ಧಾರಾವಾಹಿಗೆ ಗದಗ ತಾಲೂಕಿನ ಅಸುಂಡಿ ಗ್ರಾಮದಲ್ಲಿ ಇತೀಚೆಗೆ ಮಹೂರ್ತ ನೆರವೇರಿತು.

ಅಸುಂಡಿ ಗ್ರಾಮದ ಹಿರಿಯರಾದ ರಾಮರಡ್ಡಿ ಫ.ಹುಚ್ಚಣ್ಣವರ ಕ್ಯಾಮರಾ ಗುಂಡಿ ಒತ್ತುವ ಮೂಲಕ ಚಿತ್ರೀಕರಣ-ಕ್ಕೆ ಚಾಲನೆ ನೀಡಿ, ಧಾರವಾಹಿ ಯಶಸ್ವಿಯಾಗಿ ಮೂಡಿಬರಲಿ ಎಂದು ಹಾರೈಸಿದರು.

ಹಿರಿಯ ರಂಗಕರ್ಮಿ ಪ್ರೊ. ಆರ್.ಎನ್ ಕುಲಕರ್ಣಿ, ಗಣ್ಯರಾದ ಮಂಜುನಾಥ ಯ.ಜುಟ್ಟಪ್ಪನವರ, ಫಕೀರೇಶ ಮ.ಬಾನಪ್ಪನವರ, ಕೇದಾರಸ್ವಾಮಿ ಶಿರಹಟ್ಟಿಮಠ, ಸತೀಶ ತಿಮ್ಮರಡ್ಡಿ ಮೊರಬರಡ್ಡಿ, ಮಂಜುನಾಥ ಕಣವಿಮಠ, ದೇವರಡ್ಡಿ ಹಂಸನೂರ, ಅಶೋಕ ಹಿರೇಮಠ ಉಪಸ್ಥಿತರಿದ್ದು ಶುಭ ಹಾರೈಸಿದರು.

ಕಥೆ, ಸಂಭಾಷಣೆ ಹಾಗೂ ನಿರ್ದೇಶನದ ಹೊಣೆ ಹೊತ್ತಿರುವ ಮೌನೇಶ ಬಡಿಗೇರ ಮಾತನಾಡಿ, ನಾ ಅದೀನಿ, ಕಾಲ್ ಮಿ, ಸಾವಿರದಾರಿ, ಫೈಲ್ ಕಿರುಚಿತ್ರಗಳ ನಂತರ ನನ್ನ ನಿರ್ದೇಶನದಲ್ಲಿ ಮೊದಲ ಬಾರಿ ಧಾರಾವಾಹಿ ಪ್ರಯತ್ನ ಮಾಡುತ್ತಿದ್ದು, 'ಹಂಚಿಕೊಂಡವರು' ಇದೊಂದು ಕೌಟುಂಬಿಕ ಹಿನ್ನೆಲೆ ಹೊಂದಿರುವ, ಆಸ್ತಿ ಹಂಚಿಕೊಳ್ಳುವ ವಿಚಾರದಲ್ಲಿನ ಘಟನೆಗಳು ಮತ್ತು ಕೌಟುಂಬಿಕ ಸಂಬಂಧಗಳ ನಡುವಿನ ಕಥಾಹಂದರ ಹೊಂದಿದೆ. ಗದಗ, ಅಸುಂಡಿ, ನಾಗಾವಿ, ಅಡವಿಸೋಮಾಪುರ ಮುಂತಾದಡೆ ಚಿತ್ರೀಕರಣ ನಡೆಯಲಿದೆ. ಇದು ನಮ್ಮ ಲೋಕ ಯುಟ್ಯೂಬ್ ಚಾನೆಲ್‌ನಲ್ಲಿ ಕಂತುಗಳಲ್ಲಿ ಪ್ರಸಾರವಾಗಲಿದೆ. ಉತ್ತರ ಕರ್ನಾಟಕದ ಕಲಾವಿದರು, ತಂತ್ರಜ್ಞರ ಪ್ರಯತ್ನ ಇದಾಗಿದ್ದು, ಉತ್ತರ ಕರ್ನಾಟಕದ ಗಂಡುಭಾಷೆಯಲ್ಲಿ ಮೂಡಿಬರಲಿದೆ. ಎಲ್ಲರೂ ನೋಡಿ ಬೆಂಬಲಿಸಿ ಎಂದರು.

ಸಂಕಲನ ಕುಶಾಲ ಮಾನಕೆ, ಛಾಯಾಗ್ರಾಹಣ ಮಂಜು ಒಂಟೆತ್ತಿನ, ಧರ್ಮೇಂದ್ರ ಇಟಗಿ, ನಿರ್ಮಾಣ ನಿರ್ವಹಣೆ ರಾಚಯ್ಯ ಹೊಸಮಠ, ಪ್ರಚಾರಕಲೆ ಧರ್ಮೇಂದ್ರ ಇಟಗಿ ನಿರ್ವಹಿಸುತ್ತಿದ್ದಾರೆ.

ಧಾರಾವಾಹಿಯಲ್ಲಿ ರಾಚಯ್ಯ ಹೊಸಮಠ, ಅಂಕಿತಾ ಬೊಮ್ಮಣಗಿ, ಪ್ರೊ. ಆರ್.ಎನ್ ಕುಲಕರ್ಣಿ, ಗಾಯಿತ್ರಿ ಹಿರೇಮಠ, ಸುಮಾ ಪಿಡ್ಡನಗೌಡರ, ಹೇಮಂತ ಎಸ್.ದಳವಾಯಿ, ವಿಜಯಕುಮಾರ ಹೆಬಸೂರ, ವಿಶ್ವನಾಥ ಬೇಂದ್ರೆ, ದುರ್ಗೇಶ ಬೆಳ್ಳಟ್ಟಿ, ಮೌನೇಶ ಬಡಿಗೇರ, ಉಜ್ವಲ್ ಕಬಾಡಿ, ಸುಭಾಷ ಮಳಗಿ, ವೀರಯ್ಯ ಹೊಸಮಠ, ಸಂತೋಷ ನಾಮದೆ, ಧರ್ಮೇಂದ್ರ ಇಟಗಿ, ಗಣೇಶ, ಅಶೋಕ ಹಿರೇಮಠ, ಮಂಜು ಒಂಟೆತ್ತಿನ, ಮಂಜುನಾಥ ಕಣವಿಮಠ, ದೇವರಡ್ಡಿ ಹಂಸನೂರ ಸೇರಿದಂತೆ ಮುಂತಾದವರು ಅಭಿನಯಿಸುತ್ತಿದ್ದಾರೆ.

# ಗಂಗಾ ಕಲ್ಯಾಣ ಬಾಕಿ ಅರ್ಜಿಗಳನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ಸೂಚನೆ



■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಗಂಗಾ ಕಲ್ಯಾಣ ಕೊಳವೆ ಬಾವಿ ವಿದ್ಯುದೀಕರಣಕ್ಕೆ 1948 ಅರ್ಜಿಗಳು ಬಾಕಿ ಉಳಿದಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಮುಖ್ಯಮಂತ್ರಿಗಳು ಇದನ್ನು ಇನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಿ ಎಂದು ಸ್ಪಷ್ಟ ಸೂಚನೆ ನೀಡಿದರು.

ಇಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಂದುವರೆದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಇಂಧನ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಈ ಸೂಚನೆ ನೀಡಿದರು.

ಎಸ್ಕಾಂಗಳು ವಿದ್ಯುಚ್ಛಕ್ತಿ ಸಂಪರ್ಕ ಒದಗಿಸುವುದಕ್ಕೆ ಅನಗತ್ಯ ವಿಳಂಬ ಮಾಡಕೂಡದು. ಶುಲ್ಕ ಪಾವತಿಸಿಲ್ಲ ಎಂದು ಬಾಕಿ ಉಳಿಸಿಕೊಳ್ಳಬಾರದು. ಇದಕ್ಕೆ ಟ್ರಾನ್ಸ್‌ಫಾರ್ಮರ್ ಗಳು ಇಲ್ಲ, ಕಂಬಗಳಿಲ್ಲ ಎಂಬ ನೆಪಗಳನ್ನು ಹೇಳಬಾರದು ಎಂದು ಇಂಧನ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.


## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com

ಮೊ : 9019256545

# ಮುಕ್ತಿಮಂದಿರ ಜಾಗತಿಕ ಧರ್ಮಕ್ಷೇತ್ರವಾಗಲಿದೆ

▸▸ಮೊದಲನೇ ಪುಟದಿಂದ



ಕಾರ್ಯವನ್ನು ಯಶಸ್ವಿಗೊಳಿಸಿವದು ಅವಶ್ಯವಾಗಿದೆ ಎಂದು ನುಡಿದರು.

ಬನ್ನಿಕೊಪ್ಪದ ಡಾ.ಸುಜ್ಞಾನದೇವ ಶಿವಾಚಾರ್ಯರು, ಗಂಜಿಗಟ್ಟಿಯ ಶಿವಲಿಂಗೇಶ್ವರ ಶಿವಾಚಾರ್ಯರು, ಬಂಕಾಪುರದ ಅರಳೆಲೆ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು, ಕಲಾದಗಿ ಗಂಗಾಧರ ಶಿವಾಚಾರ್ಯರು, ಮಳೆಮಲ್ಲಿಕಾರ್ಜುನ ಶ್ರೀಗಳು, ಮಾಜಿ ಸಿ.ಎಂ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ, ಮಾಜಿ ಸಂಸದ ಮಂಜುನಾಥ ಕುನ್ನೂರ, ಶಾಸಕರಾದ ಜಿ.ಎಸ್ ಪಾಟೀಲ, ಶ್ರೀನಿವಾಸ ಮಾನೆ, ಡಾ.ಚಂದ್ರು ಲಮಾಣಿ, ಮಾಜಿ ಶಾಸಕ ಜಿ.ಎಸ್ ಗಡ್ಡದ್ದೇವರಮಠ, ಜಿ.ಎಂ ಮಹಾಂತಶೆಟ್ಟರ, ಆನಂದ ಗಡ್ಡದೇವರಮಠ, ಇಂಜಿನಿಯರ್‌ಗಳಾದ ದಯಾನಂದ, ಅರವಿಂದ, ನೀರಾವರಿ ಇಲಾಖೆ ನಿರ್ದೇಶಕ ಮಲ್ಲಿಕಾರ್ಜುನ ಜಿ., ಸುರೇಶ ಬಾಬು, ಸಂಗಮ, ಚಿದಾನಂದ, ಶಿವನಗೌಡ ಪಾಟೀಲ, ತಮಿಳುನಾಡಿನ ವಾಸ್ತುಶಿಲ್ಪಿ ವರದರಾಜ್, ಹಾಲಸ್ವಾಮಿ, ನೂಲ್ವಿಯ ಶಂಕರಗೌಡ ಶಿದ್ದನಗೌಡ್ರ ಸೇರಿ ಜನಪ್ರತಿನಿಧಿಗಳು, ಗಣ್ಯರು, ಹಿರಿಯರು, ದಾನಿಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಭಜನೆ, ಡೊಳ್ಳು ಸೇರಿ ವಾದ್ಯಮೇಳದವರು, ಗದಗ, ಹಾವೇರಿ, ಧಾರವಾಡ ಜಿಲ್ಲೆಯ ಭಕ್ತರು ಪಾಲ್ಗೊಂಡಿದ್ದರು. ಗುರುಪಾದಯ್ಯ ಸಾಲಿಮಠ ನಿರೂಪಿಸಿದರು.

# ಅಲ್ಪಸಂಖ್ಯಾತರ ಪತ್ರಿಕೆಗಳಿಗೆ ಜಾಹೀರಾತು ನೀಡಲು ಮನವಿ

▸▸ಮೊದಲನೇ ಪುಟದಿಂದ

ಅಲ್ಪಸಂಖ್ಯಾತರ ದಿನ ಪತ್ರಿಕೆಗಳ ಸಂಪಾದಕರ ಸಂಘದ ನೇತೃತ್ವದಲ್ಲಿ ಮನವಿ ಮಾಡಲಾಯಿತು. ಹಾಗೂ ಮಾನ್ಯತೆ ಪಡೆದ ಅಧಿಕೃತ ಅಲ್ಪಸಂಖ್ಯಾತರ ಪತ್ರಕರ್ತರಿಗೆ ಲ್ಯಾಪ್‌ಟಾಪ್, ಸ್ಟಿಲ್ ಕ್ಯಾಮೆರಾ ಒಳಗೊಂಡ ಮಾಧ್ಯಮ ಕಿಟ್‌ನ್ನು ಮಂಜೂರು ಮಾಡಿ ಆದೇಶಿಸಿರುತ್ತಾರೆ. ಸದರಿ ವರ್ಷದಲ್ಲಿ ಆಯ್ದ ಪತ್ರಕರ್ತರಿಗೆ ಮಾಧ್ಯಮ ಕಿಟ್ ನೀಡಲಾಗಿದ್ದು, ರಾಜ್ಯದಲ್ಲಿ ಇನ್ನೂ ಸಾಕಷ್ಟು ಜನ ಮಾಧ್ಯಮ ಕಿಟ್ ಪಡೆಯದೆ ಇರುವ ಅಲ್ಪಸಂಖ್ಯಾತ ಸಮುದಾಯದ ಪತ್ರಕರ್ತರು ಇದ್ದು, ಅವರೆಲ್ಲರಿಗೂ ಒಂದೇ ಬಾರಿಗೆ ಮಾಧ್ಯಮ ಕಿಟ್ ನೀಡುವ ಅವಶ್ಯಕತೆ ಇರುತ್ತದೆ. ಸಂಬಂಧಪಟ್ಟ ಇಲಾಖೆಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಮನವಿ ಮಾಡಲಾಯಿತು.

ಮನವಿ ಪತ್ರ ಸ್ವೀಕರಿಸಿದ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ ಮನವಿಗೆ ಸ್ಪಂದಿಸಿದ್ದು, ಈ ಕುರಿತು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಬೇಡಿಕೆ ಈಡೇರಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯ ಸಂಚಾಲಕರಾದ ಖಾನ್‌ಸಾಬ್ ಮೋಮಿನ್, ಅಮನ್ ಕೊಡಗಲಿ, ಹೆಚ್.ಎಂ. ಶರೀಫನವರ್, ನೂರಅಹ್ಮದ್ ಮಕಾನದಾರ, ಕರ್ನಾಟಕ ರಾಜ್ಯ ಎಸ್ಸಿ, ಎಸ್ಟಿ ಸಂಪಾದಕರ ಸಂಘದ ಪಿ.ಚನ್ನಬಸವ ಬಾಗಲವಾಡ, ಟಿ. ರವಿಕುಮಾರ, ಚೆಲುವರಾಜ್, ಸೋಮಶೇಖರ ಕೆರಗೋಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ರೈತ ಬಾಂಧವರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಜಿಲ್ಲೆಯಲ್ಲಿ ಕೃಷಿ ಭೂಮಿ ಹೊಂದಿರುವ ಅರ್ಹ ಪ್ರತಿ ರೈತ ಕುಟುಂಬಕ್ಕೆ ಕೇಂದ್ರ ಸರ್ಕಾರದಿಂದ ಮೂರು ಸಮಾನ ಕಂತುಗಳಲ್ಲಿ ವಾರ್ಷಿಕ ರೂ. 6000 ಆರ್ಥಿಕ ನೇರವು ನೀಡಲಾಗುತ್ತಿದೆ. ಕೇಂದ್ರ ಸರ್ಕಾರವು 15ನೇ ಕಂತಿನ ಆರ್ಥಿಕ ನೆರವನ್ನು ಇ-ಕೆವೈಸಿ ಮಾಡಿಸಿದ ಹಾಗೂ ಬ್ಯಾಂಕ್ ಖಾತೆಗಳಿಗೆ ಆಧಾರ್ ಜೋಡಣೆ ಮಾಡಿಸಿದ ಅರ್ಹ ಫಲಾನುಭವಿಗಳಿಗೆ ಮಾತ್ರ ಬಿಡುಗಡೆ ಮಾಡುತ್ತಿದ್ದು, ಇ-ಕೆವೈಸಿ ಮಾಡಿಸುವುದನ್ನು ಕಡ್ಡಾಯಗೊಳಿಸಿದೆ.

ಜಿಲ್ಲೆಯಲ್ಲಿ ಒಟ್ಟು 1,30,310 ಫಲಾನುಭವಿಗಳಿದ್ದು, ಇಲ್ಲಿಯವರೆಗೆ 1,15,055 (ಶೇ.89.30) ಫಲಾನುಭವಿಗಳು ಮಾತ್ರ ಇ-ಕೆವೈಸಿ ಮಾಡಿಸಿಕೊಂಡಿದ್ದು, ಇನ್ನೂ 15,255 (ಶೇ.10.70) ಫಲಾನುಭವಿಗಳು ಇ-ಕೆವೈಸಿ ಮಾಡಿಸಿಕೊಳ್ಳುವದು ಬಾಕಿ ಇರುತ್ತದೆ. ಬಾಕಿ ಇರುವ ರೈತರು ಈ ಕೂಡಲೇ ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಸಾರ್ವಜನಿಕ ಸೇವಾ ಕೇಂದ್ರ, ಅಥವಾ ಗ್ರಾಮ್ ಒನ್ ಕೇಂದ್ರಕ್ಕೆ (ಆಧಾರ್ ಕಾರ್ಡ್ ಮತ್ತು ಆಧಾರ್ ಜೋಡಣೆಯಾದ ಮೊಬೈಲ್‌ನೊಂದಿಗೆ) ಭೇಟಿ ನೀಡಿ ಇ-ಕೆವೈಸಿ ಮಾಡಿಸಿಕೊಳ್ಳಲು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕ್ರೀಡೆ ದೇಹವನ್ನು ಸದೃಢಗೊಳಿಸುತ್ತದೆ



■ವಿಜಯಸಾಕ್ಷಿ ಸುದ್ದಿ, ರೋಣ

ಕ್ರೀಡೆಗಳು ಮನುಷ್ಯನ ದೇಹವನ್ನು ಸದೃಡಗೊಳಿಸುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ. ವಿದ್ಯಾರ್ಥಿಗಳು ಸೇರಿ, ಯುವಕರು ಸಹ ಕ್ರೀಡಾ ಮನೋಭಾವನೆಯನ್ನು ಬೆಳಸಿಕೊಳ್ಳಬೇಕು ಎಂದು ತಾ.ಪಂ ಮಾಜಿ ಸದಸ್ಯ ಅಂದಪ್ಪ ಬಿಚ್ಚೂರ ಹೇಳಿದರು.

ಅವರು ಮಂಗಳವಾರ ನಿಡಗುಂದಿ ಗ್ರಾಮದಲ್ಲಿ ಗಜೇಂದ್ರಗಡ ತಾಲೂಕಾ ಮಟ್ಟದ ಪ್ರಾಥಮಿಕ ಹಾಗೂ ಪ್ರೌಡಶಾಲೆಗಳ ವ್ಹಾಲಿಬಾಲ್ ಪಂದ್ಯಾವಳಿಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸ್ಪರ್ಧಾತ್ಮಕ ಯುಗದಲ್ಲಿ ಕ್ರೀಡೆಗಳಿಗೆ ಹೆಚ್ಚಿನ ಮಹತ್ವ ಇರುವುದನ್ನು ವಿದ್ಯಾರ್ಥಿಗಳು ಮತ್ತು ಕ್ರೀಡಾಪಟುಗಳು ತಿಳಿದಿದ್ದರೂ ಸಹ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿಯನ್ನು ತೋರುತ್ತಿಲ್ಲ ಎನ್ನುವುದು ವಿಷಾದಕರ. ವಿದ್ಯಾರ್ಥಿಗಳು, ಕ್ರೀಡಾಪುಗಳು ತಮ್ಮ ಇಷ್ಟದ ಕ್ರೀಡೆಯನ್ನು ಪ್ರೀತಿಸುವ ಮೂಲಕ ಅದರಲ್ಲಿ ಮಗ್ನರಾಗಬೇಕು. ಅಕ್ಷರ ಜ್ಞಾನದೊಂದಿಗೆ ಕ್ರೀಡೆಯಲ್ಲಿ ಭಾಗವಹಿಸಬೇಕು. ಅಂದಾಗ ಯಶಸ್ಸು ಹೊಂದಲು ಸಾಧ್ಯ ಎಂದರು.

ಗ್ರಾ.ಪಂ ಅಧ್ಯಕ್ಷೆ ಗೀತಾ ಕುಕನೂರ ಪಂದ್ಯಾವಳಿಗಳನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಕೃಷ್ಣಾ ರಾಠೋಡ ವಹಿಸಿದ್ದರು. ಬಾಬು ಮುಲ್ಲಾ, ಫಕ್ಕೀರಪ್ಪ ಕುಕನೂರ, ಚಂದ್ರು ಗಂಗರಗೊಂಡ, ಚೇತನ್ ಅಣಗೌಡ್ರ, ಯಲ್ಲಪ್ಪ ಹಳ್ಳಿ, ನಾಗರಾಜ್ ಗಡಾದ, ರಾಜು ಜಂಗಣ್ಣವರ, ಎಸ್.ಬಿ ಹಳ್ಳಿಕೇರಿ, ಕೆ.ಬಿ ಗಡಾದ, ಎಂ.ಬಿ ಕೊಪ್ಪದ, ಎಚ್.ಬಿ ಕಟ್ಟಿಮನಿ ಸೇರಿದಂತೆ ಗ್ರಾ.ಪಂ ಸದಸ್ಯರು, ದೈಹಿಕ ಶಿಕ್ಷಕರು ಉಪಸ್ಥಿತರಿದ್ದರು.

## 30ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಸರಕಾರಿ ಶಾಲಾ ಕಟ್ಟಡ ಉದ್ಘಾಟಿಸಿದ ಸಚಿವ ತಂಗಡಗಿ

# ಕನ್ನೇರುಮಡು ಗ್ರಾಮಸ್ಥರ ಶಿಕ್ಷಣ ಪ್ರೇಮ ಇತರರಿಗೆ ಮಾದರಿ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಶಾಲಾಭಿವೃದ್ಧಿಯಲ್ಲಿ ಗ್ರಾಮಸ್ಥರ ಪಾತ್ರ ಮಹತ್ವದ್ದಾಗಿದ್ದು, ಈ ಹಿನ್ನಲೆಯಲ್ಲಿ ಶಾಲಾ ಕಾರ್ಯಕ್ರಮವನ್ನು ಹಬ್ಬದಂತೆ ಆಚರಿಸುವ ಕನ್ನೇರುಮಡು ಗ್ರಾಮಸ್ಥರು ಇತರ ಗ್ರಾಮಸ್ಥರಿಗೆ ಮಾದರಿಯಾಗಿದ್ದಾರೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಹೇಳಿದರು.

ಅವರು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ವಿವೇಕ ಯೋಜನೆಯಡಿಯಲ್ಲಿ 30 ಲಕ್ಷ ರೂ.ವೆಚ್ಚದಲ್ಲಿ ನಿರ್ಮಾಣಗೊಂಡ ಜಿಲ್ಲೆಯ ಕನಕಗಿರಿ ತಾಲೂಕಿನ ಕನ್ನೇರುಮಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕೊಠಡಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ನಮ್ಮ ಗ್ರಾಮಕ್ಕೆ ದೇವಸ್ಥಾನಕ್ಕಿಂತ ಮೊದಲು ಶಾಲೆಯಾಗಬೇಕು. ಶಾಲೆಯಾದರೆ ನಮ್ಮೂರ ಶಾಲಾ ಮಕ್ಕಳ ಕಲಿಕಾಮಟ್ಟ ಸುಧಾರಿಸಲಿದೆ ಎಂದು ಹೇಳುವ ಕನ್ನೇರುಮಡು ಗ್ರಾಮಸ್ಥರಂತೆ ಇತರ ಗ್ರಾಮಸ್ಥರ ಮನಸ್ಥಿತಿ ಬದಲಾಗಬೇಕು.



ನಮ್ಮೂರ ಶಾಲೆಗೆ ಇನ್ನು ಸಹ ಕೊಠಡಿಗಳು ಬೇಕು ಎಂದು ಹೇಳುತ್ತಾ ಶಾಲಾ ಏಳ್ಗೆಗೆ ದುಡಿಯುವಲ್ಲಿನ ಕನ್ನೇರುಮಡು ಗ್ರಾಮಸ್ಥರಲ್ಲಿನ ಹುಮ್ಮಸ್ಸು, ಅವರಲ್ಲಿನ ಶಿಕ್ಷಣ ಪ್ರೇಮ ಇತರರಿಗೆ ಅಕ್ಷರಶಃ ಮಾದರಿಯಾಗಿದೆ ಎಂದು ಸಚಿವ ತಂಗಡಗಿ ಹೇಳಿದರು.

ಯಾವ ಗ್ರಾಮದಲ್ಲಿ ಶಾಲೆಯ ಗಂಟೆ ಸದ್ದು ಜೋರಾಗಿ ಮೊಳಗುತ್ತದವೋ ಆ ಊರು ಬೇಗನೆ ಅಭಿವೃದ್ಧಿಯಾಗಲು ಸಾಧ್ಯವಿದೆ ಎನ್ನುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಯನ್ನು ಗ್ರಾಮಸ್ಥರು ಅರಿಯಬೇಕು.

ಗ್ರಾಮಸ್ಥರು ದೇವಸ್ಥಾನಗಳ ನಿರ್ಮಾಣದ ಬೇಡಿಕೆ ಇಡುವುದಕ್ಕಿಂತ ಶಾಲೆಗಳ ನಿರ್ಮಾಣಕ್ಕೆ ಬೇಡಿಕೆ ಇಡುವಂತಾಗಬೇಕು ಎಂದು ಸಚಿವರು ಹೇಳಿದರು.

ಸಮಾರಂಭದಲ್ಲಿ ಕನಕಗಿರಿ ತಾಲೂಕು ತಹಸೀಲ್ದಾರ ವಿಶ್ವನಾಥ ಮುರುಡಿ, ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಚಂದ್ರಶೇಖರ, ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಜೆ.ವಿಶ್ವನಾಥ, ಶಿಕ್ಷಣ ಇಲಾಖೆಯ ಅಧಿಕಾರಿ ಚಂದ್ರಶೇಖರ, ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಸುರೇಶ ಗೌಡ್ರು, ಶಿಕ್ಷಣ ಸಂಯೋಜಕರು ಕನಕಗಿರಿ ವಲಯದ ಆಂಜನೇಯ, ಕ್ಲಸ್ಟರ್ ಮಟ್ಟದ ಅಧಿಕಾರಿ ವಿನಾಯಕ ಡಿ., ಕನಕಗಿರಿ ತಾಲೂಕು ಐಇಸಿ ಸಂಯೋಜಕರಾದ ಶಿವು, ಮುಸಲಾಪುರ ಗ್ರಾಮ ಪಂಚಾಯತ್ ಅಧ್ಯಕ್ಷೆ ರೇಣುಕಮ್ಮ ಗಂಡ ಶರಣಗೌಡ, ಉಪಾಧ್ಯಕ್ಷೆ ಚಂದ್ರಮ್ಮ ಗಂಡ ಗೋಕುರೆಪ್ಪ ತಳವಾರ ಬಮಸಾಗರ, ಗ್ರಾಪಂ ಸದಸ್ಯರಾದ ಶಿವಮ್ಮ ಗಂಡ ರುದ್ರಪ್ಪ ಗುಡದಾರ, ಎಸ್‌ಡಿಎಂಸಿ ಅಧ್ಯಕ್ಷರಾದ ರಾಮಾವಲಿ ಮುಜಾವರ, ಉಪಾಧ್ಯಕ್ಷರಾದ ಫಕೀರಪ್ಪ ಅಗಸಿಮುಂದಿನ, ಮುಸಲಾಪುರ ಪಿಡಿಓ ನಾಗೇಶ, ಶಾಲೆಯ ಮುಖ್ಯ ಗುರುಗಳಾದ ಧರ್ಮಪ್ಪ, ಗ್ರಾಮದ ಹಿರಿಯರಾದ ಗುರುರಾಜ ಕುಲಕರ್ಣಿ, ಬಸವಂತಗೌಡ್ರ, ಲಕ್ಷ್ಮಮ್ಮ ನೀರಲೂಟಿ, ರವಿ ಪಾಟೀಲ, ನಾಗಪ್ಪ ಶಿರವಾರ, ಪ್ರಮೀಳಾ ರೆಡ್ಡಿ ಹಾಗೂ ಇತರರು ಉಪಸ್ಥಿತರಿದ್ದರು.

ಗ್ರಾಮ ಪಂಚಾಯತ್ ಸದಸ್ಯರಾದ ಹೊಳಿಯಪ್ಪ ಸ್ವಾಗತಿಸಿದರು. ಶಿಕ್ಷಕ ವೆಂಕಟೇಶ ಸಿ.ಕೆ. ನಿರೂಪಿಸಿದರು. ಶಾಲೆಯ ಶಿಕ್ಷಕಿ ನಾಗರತ್ನ ಹಾಗೂ ಸಂಗಡಿಗರು ಪ್ರಾರ್ಥಿಸಿದರು.

### ಗುರುವಿನ ಸ್ಥಾನ ದೊಡ್ಡದು

ದೇಶದ ಪ್ರಧಾನಮಂತ್ರಿಗಳಿಗೆ, ಮುಖ್ಯಮಂತ್ರಿಗಳು, ಸಚಿವರು, ಶಾಸಕರಿಗೆ ಸಹ ಗುರುಗಳು ಇರುತ್ತಾರೆ. ಯಾರೇ ಇರಲಿ ಅಕ್ಷರ ಕಲಿಸಿದವರನ್ನು ನಾವು ನೆನಪಿಸಿಕೊಳ್ಳುತ್ತೇವೆ. ಯಾರೇ ಎಷ್ಟೇ ದೊಡ್ಡ ಸ್ಥಾನಕ್ಕೆ ಹೋದರು ಸಹ ನನಗೆ ಕಲಿಸಿದ ಗುರು ಇವರೇ ಎಂದು ಎಲ್ಲರೂ ನೆನಪಿಸುತ್ತಾರೆ. ಹೀಗಾಗಿ ಗುರುವಿಗೆ ದೊಡ್ಡ ಸ್ಥಾನವಿದೆ. ವೈದ್ಯರು ಜೀವ ಉಳಿಸಿದರೆ, ಗುರು ಜೀವನವನ್ನು ನಿರೂಪಿಸುತ್ತಾರೆ. ಯಾರು ಎಷ್ಟೇ ದೊಡ್ಡ ಹುದ್ದೆಯಲ್ಲಿದ್ದರು ಸಹ ಶಿಕ್ಷಕರ ಬಗ್ಗೆ ವಿಶೇಷ ಒಲವು ಇರುತ್ತದೆ ಎಂದು ಸಚಿವ ತಂಗಡಗಿ ತಿಳಿಸಿದರು.

# ಗುರುಸ್ತುತಿಯನ್ನು ಕಾರ್ಯಗತಕ್ಕೆ ತಂದ ಸಂಘ ನಿಮ್ಮದಾಗಿದೆ



■ವಿಜಯಸಾಕ್ಷಿ ಸುದ್ದಿ, ಗದಗ

ಬೆಟಗೇರಿಯ ಶ್ರೀ ಹಳೇ ಬನಶಂಕರಿ ದೇವಿ ದೇವಸ್ಥಾನದ ಆವರಣದಲ್ಲಿರುವ ದೇವಾಂಗ ನೌಕರರ ಭವನದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಗಂಡು ಮಕ್ಕಳ ಶಾಲೆ ನಂ.1ರ ಸನ್ 1986-87ನೇ ಸಾಲಿನ ವಿದ್ಯಾರ್ಥಿಗಳಿಂದ ಶ್ರೀ ಸಿ.ಎಸ್ ಹರ್ತಿಮಠ, ಎಂ.ಎಂ ಢಾಲಾಯತ ಹಾಗೂ ಐ.ಹೆಚ್ ಶಿರಹಟ್ಟಿ ಗುರುಗಳಿಗೆ ಗುರುವಂದನಾ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮದಲ್ಲಿ ಎಲ್ಲ ಗುರುಗಳನ್ನು ಸನ್ಮಾನಿಸಲಾಯಿತು. ಢಾಲಾಯತ್ ಗುರುಗಳು ಮಾತನಾಡುತ್ತ, ಇದುವರೆಗೂ ಈ ರೀತಿಯ ಗುರುವಂದನೆ ಕಾರ್ಯಕ್ರಮ ಯಾರೂ ಮಾಡಿಲ್ಲ ಮತ್ತು ಮುಂದೆಯೂ ಕಾಣುತ್ತೇವೆಯೋ ಇಲ್ಲವೋ ಎಂದು ಹರ್ಷ ವ್ಯಕ್ತಪಡಿಸಿ, ನೀವೆಲ್ಲರೂ 36 ವರ್ಷಗಳ ಹಿಂದೆ ಕಲಿತು ಇದೀಗ ತಾವೆಲ್ಲರೂ ಕೂಡಿ ಸನ್ಮಾನ ಮಾಡಿರುವುದು ವಿಶೇಷವೆಂದರು.

ಶಿರಹಟ್ಟಿ ಗುರುಗಳು ಮಾತನಾಡಿ, ನಿಮ್ಮ ತಂಡದ ಎಲ್ಲರೂ ಸೇರಿ ಒಂದು ಸಂಘವನ್ನು ಸ್ಥಾಪಿಸಿ, ಅದರಿಂದ ಸಮಾಜದ ಹಿತಕ್ಕಾಗಿ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಹೋಗಲು ತಿಳಿಸಿದರು. ಹರ್ತಿಮಠ ಗುರುಗಳು ಮಾತನಾಡಿ, ಗುರುಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರ ಎಂಬ ಗುರುಸ್ತುತಿಯನ್ನು ಕಾರ್ಯಗತಕ್ಕೆ ತಂದ ವಿದ್ಯಾರ್ಥಿಗಳ ಸಂಘ ನಿಮ್ಮದಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಕೃಷ್ಣಾ ದೀಪಾಲಿ, ಕಾರ್ಯಕ್ರಮ ನಿರೂಪಿಸಿದರು. ಪರಿಚಯವನ್ನು ರಾಜಬಾಬು ದೀಪಾಲಿ ನಡೆಸಿಕೊಟ್ಟರು. ವಂದನಾರ್ಪಣೆಯನ್ನು ರಾಘವೇಂದ್ರ ಕೊಳ್ಳಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಂತೋಷ ಪವಾರ, ವಿರೂಪಾಕ್ಷ ನೀಲಗುಂದ, ಗುರು ಮಾದಗುಂಡಿ, ಗಜಾನನ ಕೋರಿ, ಬಸವರಾಜ ಅಗಡಿ, ಮಹ್ಮದ ನದಾಫ ಮುಂತಾದವರು ಉಪಸ್ಥಿತರಿದ್ದರು.

# ಉತ್ತಮ ಆಚಾರ-ವಿಚಾರಗಳಿಂದ ನೆಮ್ಮದಿ: ರಫೀಕ್ ತೋರಗಲ್

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಮನದಲ್ಲಿನ ಅಂಧಕಾರವನ್ನು ದೂರವಾಗಿಸಿ ಬದುಕನ್ನು ಸನ್ಮಾರ್ಗದತ್ತ ಸಾಗಿಸಲು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಅವಶ್ಯಕ ಎಂದು ಡಾ.ಅಬ್ದುಲ್ ಕಲಾಂ ಟ್ರಸ್ಟ್‌ನ ಅಧ್ಯಕ್ಷ ರಫೀಕ್ ತೋರಗಲ್ ಹೇಳಿದರು.

ಪಟ್ಟಣದ ನವನಗರ ಬಡಾವಣೆಯಲ್ಲಿನ ಶ್ರಾವಣ ಮಾಸದ ನಿಮಿತ್ತ ನಾಗರಕಟ್ಟಿಯ 10ನೇ ವರ್ಷದ ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಯಮುಕ್ತ ಬದುಕಿಗೆ ದಾನ, ಧರ್ಮ ಎಂಬುದು ರಹದಾರಿಯಾಗಿದ್ದು, ಒಳ್ಳೆಯ ಆಚಾರ, ವಿಚಾರಗಳು ಮನುಷ್ಯನ ಬದುಕಿನಲ್ಲಿ ನೆಮ್ಮದಿಯ ಸೆಲೆಯಾಗಿವೆ. ಹೀಗಾಗಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ನ್ಯಾಯ, ನೀತಿ, ಧರ್ಮ ಹಾಗೂ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ವಿವರಣೆಯೊಂದಿಗೆ ಸಹಬಾಳ್ವೆಯ ಬದುಕು ನಡೆಸುವ ವಿಚಾರ ಧಾರೆಗಳು ತಿಳಿಯುತ್ತವೆ. ಒತ್ತಡ ಬದುಕಿನಿಂದ ಆಧ್ಯಾತ್ಮದ ಬದುಕಿನತ್ತ ವಾಲಲು ಧಾರ್ಮಿಕ ಕಾರ್ಯಕ್ರಮಗಳು ಸಹಾಯಕವಾಗಿವೆ ಎಂದರು.



ಗಜೇಂದ್ರಗಡ-ಉಣಚಗೇರಿ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಸಿದ್ದಣ್ಣ ಬಂಡಿ ಮಾತನಾಡಿ, ಪಟ್ಟಣದ ನವನಗರ ಬಡಾವಣೆಯಲ್ಲಿ ಕಳೆದ 9 ವರ್ಷಗಳಿಂದ ಶ್ರಾವಣ ಮಾಸದಲ್ಲಿ ನಡೆಯುತ್ತಿರುವ ಅನ್ನಸಂತರ್ಪಣೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಬಡಾವಣೆಯ ಎಲ್ಲ ಸಮುದಾಯದವರು ಭಾಗವಹಿಸುವ ಮೂಲಕ ಸೌಹಾರ್ದತೆಗೆ ಸಾಕ್ಷಿಯಾಗಿದ್ದಾರೆ. ಇಂತಹ ಕಾರ್ಯಕ್ರಮಗಳು ಇನ್ನಷ್ಟು ನಡೆಯುವ ಮೂಲಕ 'ಎಲ್ಲರೂ ಒಂದು' ಎಂಬ ಸಂದೇಶ ಗಟ್ಟಿಯಾಗಿ, ಸಹಬಾಳ್ವೆ ನಡೆಸಲು ಸಹಕಾರಿ ಎಂದರು.

ಬಡಾವಣೆಯ ಮಹಿಳೆಯರು ಬೆಳಿಗ್ಗೆ ನಾಗರಕಟ್ಟೆಗೆ ಸೀರೆ ಉಡಿಸಿ, ವಿಶೇಷ ಪೂಜೆ ಸಲ್ಲಿಸಿದರು. ಬಳಿಕಸ ಸಾಮೂಹಿಕ ಅನ್ನ ಸಂತರ್ಪಣೆ ನಡೆಯಿತು. ಮುಖಂಡರಾದ ಕಳಕಪ್ಪ ಪೋತಾ, ಮಹ್ಮದ ಅಕ್ಕಿ, ಪ್ರಭುಗೌಡ ಚಿನ್ನೂರ, ಬಬ್ಲು ಮನಿಯಾರ, ಮಲ್ಲಪ್ಪ ಟೇಲರ, ರಾಜು ರುದ್ರಗಂಟಿ, ಅಂಬಾಸ ರಂಗ್ರೇಜ, ರಮೇಶ ವ್ಯಾಪಾರಿ, ರೋಣಪ್ಪ ಹಲಗಿ, ಅಲ್ತಾಪ ಹೊಸಮನಿ ಮುಂತಾದವರಿದ್ದರು.




ದೇಶ ವಿರೋಧಿ ಶಕ್ತಿಗಳನ್ನು ಮಟ್ಟ ಹಾಕಲು ದೇಶದ ಎಲ್ಲಾ ರಾಜ್ಯಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಕರೆ ನೀಡಿದರು.

# ರಾಣಿ ಚನ್ನಮ್ಮ ಸಹಕಾರಿ ಸಂಘದ ನಿರ್ದೇಶಕರ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ರಾಣಿ ಚನ್ನಮ್ಮ ವಿವಿಧೋದ್ದೇಶಗಳ ಸಹಕಾರಿ ಸಂಘದ ಮಾಸಿಕ ಸಭೆಯಲ್ಲಿ ಗುರುಶಾಂತಗೌಡ ಲಿಂಗನಗೌಡ ಮರಿಗೌಡ್ರ, ಈರಣ್ಣ ಮಹಾದೇವಪ್ಪ ಮಾನೇದ, ಮಲ್ಲಿಕಾರ್ಜುನ ಬಸಪ್ಪ ಕರಿಬಿಷ್ಠಿ ಅವರನ್ನು ನೂತನ ನಿರ್ದೇಶಕರಾಗಿ ಬಹುಮತದಿಂದ ಆಯ್ಕೆ ಮಾಡಲಾಯಿತು.



ಸಭೆಯಲ್ಲಿ ಅಧ್ಯಕ್ಷ ಎಂ.ಬಿ ಗದಗಿನ (ಕರಿಬಿಷ್ಠಿ), ಉಪಾಧ್ಯಕ್ಷ ಸಿ.ಪಿ ಹುಣಸಿಕಟ್ಟಿ, ಮಾಜಿ ಅಧ್ಯಕ್ಷ ಎಂ.ಎಸ್ ಪಾಟೀಲ, ನಿರ್ದೇಶಕರಾದ ಎಸ್.ವ್ಹಿ ಗೋಡಿ, ಎಮ್.ಆಯ್ ಹಿರೇಮನಿಪಾಟೀಲ, ಜೆ.ಸಿ ಉಗಲಾಟದ, ಎಂ.ಎಸ್ ಮಲ್ಲಾಪೂರ, ಎಸ್.ಪಿ ಅಕ್ಕಿ, ವಿ.ಎಫ್ ಗಡ್ಡಿ, ಆಡಳಿತ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಗಜೇಂದ್ರಗಡ-ಉಣಚಗೇರಿ ಪಂಪ್‌ಸೆಟ್‌ಗಳ ಹೋರಾಟ ಸಮಿತಿಯಿಂದ ಪತ್ರಿಕಾಗೋಷ್ಠಿ

# ರೈತರು ಯಾರಿಗೂ ಹಣವನ್ನು ನೀಡಿಲ್ಲ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಉಣಚಗೇರಿ ಭಾಗದ ರೈತರು ವಿದ್ಯುತ್ ಸಮಸ್ಯೆ ಪರಿಹಾರಕ್ಕಾಗಿ 21 ದಿನ ಅಹೋರಾತ್ರಿ ಹೋರಾಟ ನಡೆಸಿದಾಗ ಸೌಜನ್ಯಕ್ಕೂ ಬಂದು ಸಮಸ್ಯೆ ಅಲಿಸದ ಅಂದಿನ ಶಾಸಕರು ಇತ್ತೀಚೆಗೆ ರೈತರ ಪರವಾಗಿ ಹೋರಾಟ ನಡೆಸಿದ್ದು ವಿಪರ್ಯಾಸ ಎಂದು ಪಂಪ್‌ಸೆಟ್ ಬಳಕೆದಾರರ ಸಂಘದ ಅಧ್ಯಕ್ಷ ಮುತ್ತಣ್ಣ ಮ್ಯಾಗೇರಿ ಹೇಳಿದರು.

ಪಟ್ಟಣದ ರೈತ ಭವನದಲ್ಲಿ ಮಂಗಳವಾರ ಗಜೇಂದ್ರಗಡ-ಉಣಚಗೇರಿ ಪಂಪ್‌ಸೆಟ್‌ಗಳ ಹೋರಾಟ ಸಮಿತಿ ಹಾಗೂ ರೈತರು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಪಟ್ಟಣದ 23ನೇ ವಾರ್ಡಿನ ಉಣಚಗೇರಿ ಗ್ರಾಮದ ರೈತರು ನಿರಂತರ ವಿದ್ಯುತ್‌ಗಾಗಿ ಆಗ್ರಹಿಸಿ



21 ದಿನಗಳ ಕಾಲ ಹೆಸ್ಕಾಂ ಕಚೇರಿ ಎದುರು ಹೋರಾಟ ನಡೆಸಿದರೂ ಸಹ ಅಂದಿನ ಶಾಸಕ ಕಳಕಪ್ಪ ಬಂಡಿ ಸೌಜನ್ಯಕ್ಕೂ ಸಮಸ್ಯೆ ಆಲಿಸಲು ಬರಲಿಲ್ಲ. ಆದರೆ ಇತ್ತೀಚೆಗೆ ಪಟ್ಟಣದ ಕೆ.ಕೆ ವೃತ್ತದಲ್ಲಿ ನಡೆದ ಹೋರಾಟದಲ್ಲಿ ಬಿಜೆಪಿಯ ಕೆಲ ಮುಖಂಡರು ರೈತರಿಂದ 5ರಿಂದ 6 ಸಾವಿರ ರೂ. ಹಣವನ್ನು ಪಡೆದು ಹೋರಾಟವನ್ನು ನಡೆಸಿ ಸುಳ್ಳು ಆರೋಪವನ್ನು ಮಾಡಿದ್ದರು ಎಂದು ಆರೋಪಿಸಿದ್ದಾರೆ. ಹೀಗಾಗಿ ಉಣಚಗೇರಿ ಗ್ರಾಮದ ರೈತರು ಯಾರಿಗೂ ಹಣವನ್ನು ನೀಡಿಲ್ಲ ಎಂದು ಅಲ್ಲಿನ ರೈತರೇ ಸ್ಪಷ್ಟನೆ ನೀಡಿದ್ದಾರೆ.

ಈ ಬಗ್ಗೆ ದಾಖಲೆಗಳಿದ್ದರೆ ಪ್ರದರ್ಶಿಸಿ ಎಂದರು.

ರೈತರಾದ ಶಿವಪ್ಪ ಕುಂಬಾರ ಹಾಗೂ ಇಸ್ಮಾಯಿಲ್ ಗೊಲಗೇರಿ ಮಾತನಾಡಿ, ಉಣಚಗೇರಿ ರೈತರಿಗೆ ಪುರಸಭೆ ಹಾಗೂ ಗ್ರಾ.ಪಂ ಸೌಲಭ್ಯಗಳು ಸಿಗುತ್ತಿಲ್ಲ. ಹೀಗಾಗಿ ನಾವು ನಿರಂತರ ವಿದ್ಯುತ್ ಪೂರೈಕೆಗಾಗಿ ಹೆಸ್ಕಾಂ ಕಚೇರಿ ಎದುರು ನಡೆಸಿದ ಹೋರಾಟ ವೇಳೆ ಊಟ, ಉಪಹಾರಕ್ಕೆ ರೈತರು 100-200 ರೂ. ವ್ಯಯಿಸಿ ಹೋರಾಟ ಮಾಡಿದ್ದೇವೆ. ನಾವು ಯಾರಿಗೂ ಹಣವನ್ನು ನೀಡಿಲ್ಲ, ನಮ್ಮಿಂದಲೂ ಯಾರೂ ಹಣ ಸಂಗ್ರಹಿಸಿಲ್ಲ ಎಂದರು.

ಸಿದ್ದು ಗೊಂಗಡಶೆಟ್ಟಿಮಠ, ಬಸವರಾಜ ಪಲ್ಲೇದ, ರಾಜಪ್ಪ ದಾರೋಜಿ, ಹನಮಂತ ಪವಾರ, ಅನೀಪ ಕಟ್ಟಿಮನಿ, ಅಂಬ್ರೇಶ ಮಾರನಬಸರಿ, ಗೌರೀಶ ಪಲ್ಲೇದ ಮುಂತಾದವರು ಉಪಸ್ಥಿತರಿದ್ದರು.

ಪುರಸಭೆ ವಿಪಕ್ಷ ನಾಯಕ ಮುರ್ತುಜಾ ಡಾಲಾಯತ ಮಾತನಾಡಿ, ಉಣಚಗೇರಿ ಗ್ರಾಮದ ರೈತರ ನ್ಯಾಯ ಸಮ್ಮತ ಬೇಡಿಕೆಗೆ ನಾವು ಬೆಂಬಲ ಕೊಟ್ಟಾಗ ಬಿಜೆಪಿಗರು ನಮ್ಮನ್ನು ನಕಲಿ ಹೋರಾಟಗಾರರು ಎಂದು ಗೇಲಿ ಮಾಡಿದ್ದರು. ಆದರೆ ಮೊನ್ನೆ ಹೋರಾಟದಲ್ಲಿ ಬಿಜೆಪಿಗರು ಆಧಾರವಿಲ್ಲದ ಆರೋಪ ಮಾಡಿದ್ದಾರೆ. ಅಧಿಕಾರದಲ್ಲಿದ್ದಾಗ ರೈತರ ಬಗ್ಗೆ ಕಾಳಜಿ ತೋರಿಸದ ಬಿಜೆಪಿಗರು ಇಂದು ರೈತರ ಬಗ್ಗೆ ಚಿಂತೆ ಮಾಡುವುದು ಬೇಕಾಗಿಲ್ಲ. ಸರ್ಕಾರವು ಗ್ಯಾರಂಟಿಗಳ ಗದ್ದಲದಲ್ಲಿದ್ದು, ಈ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಶಾಸಕ ಜಿ.ಎಸ್ ಪಾಟೀಲ ಅವರು ಈಗಾಗಲೇ ಇಂಧನ ಸಚಿವರ ಜೊತೆ ಮಾತನಾಡಿದ್ದು, ಶೀಘ್ರದಲ್ಲಿಯೇ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದರು.

ಗದಗ ಎಸ್ಎಸ್‌ಕೆ ಸಮಾಜದ ದಸರಾ ಉತ್ಸವ ಉಪ-ಸಮಿತಿ ಪದಾಧಿಕಾರಿಗಳ ಆಯ್ಕೆ

# ವಿಜೃಂಭಣೆಯ 'ನಮ್ಮೂರ ದಸರಾ' ಆಚರಣೆಗೆ ನಿರ್ಧಾರ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹಳೇ ಸರಾಫ ಬಜಾರದ ಶ್ರೀ ಜಗದಂಬಾ ದೇವಸ್ಥಾನದ ಸಹಸ್ರಾರ್ಜುನ ಸಮುದಾಯ ಭವನದ ಲಕ್ಷ್ಮಣಸಾ ಸಭಾಗ್ರಹದಲ್ಲಿ 2023-24ನೇ ಸಾಲಿನ ದಸರಾ ಉತ್ಸವದ ಪೂರ್ವಭಾವಿ ಸಭೆ ಜರುಗಿತು.

ಸಭೆಯಲ್ಲಿ ಗದಗ ಎಸ್ಎಸ್‌ಕೆ ಸಮಾಜದ ಅಧ್ಯಕ್ಷರಾದ ಫಕೀರಸಾ ಬಾಂಡಗೆ ಅವರ ಅಧ್ಯಕ್ಷತೆಯಲ್ಲಿ ನಮ್ಮೂರ ದಸರಾ ಉತ್ಸವದ ಉಪ-ಸಮಿತಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಸಮಿತಿಯ ಚೇರಮನ್ನರಾಗಿ ವಿನೋದ ಬಾಂಡಗೆ, ವೈಸ್ ಚೇರಮನ್ನರಾಗಿ ವಿಷ್ಣುಸಾ ಶಿದ್ಲಿಂಗ, ಗೌರವ ಕಾರ್ಯದರ್ಶಿಯಾಗಿ ಪರಶುರಾಮ ಹಬೀಬ, ಸಹ ಕಾರ್ಯದರ್ಶಿಯಾಗಿ ಶಾಂತಾಬಾಯಿ ಬಾಕಳೆ, ಖಜಾಂಚಿಯಾಗಿ ವೆಂಕಟೇಶ ಹಬೀಬ ಆಯ್ಕೆಯಾಗಿದ್ದಾರೆ. ನಮ್ಮೂರ ದಸರಾ ಉತ್ಸವವು ಪ್ರತೀ ವರ್ಷದಂತೆ ವಿವಿಧ ಕಲಾತಂಡಗಳೊಂದಿಗೆ ಅತೀ ವಿಜೃಂಭಣೆಯಿಂದ ಮೆರವಣಿಗೆಯನ್ನು ಆಚರಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಗದಗ ಎಸ್ಎಸ್‌ಕೆ ಸಮಾಜ ಪಂಚ ಕಮಿಟಿಯ ಉಪಾಧ್ಯಕ್ಷ ರಾಜು ಬದಿ, ಸಹ ಕಾರ್ಯದರ್ಶಿ ರವಿ ಶಿದ್ಲಿಂಗ, ಪಂಚ ಕಮಿಟಿ ಸದಸ್ಯರಾದ ಸುರೇಶಕುಮಾರ ಬದಿ, ಅಂಬಾಸಾ ಖಟವಟೆ, ಮಾರುತಿ ಪವಾರ, ಪರಶುರಾಮ ಬದಿ, ಮೋತಿಲಾಲಸಾ ಪೂಜಾರಿ, ಶ್ರೀನಿವಾಸ ಬಾಂಡಗೆ, ಅನಿಲ ಖಟವಟೆ, ಗಂಗಾಧರ ಹಬೀಬ, ಹಿರಿಯರಾದ ಡಾ. ಆರ್.ಎಚ್ ಕಬಾಡಿ, ಜಿ.ಎನ್ ಹಬೀಬ, ತರುಣ ಸಂಘದ ಅಧ್ಯಕ್ಷ ವಿಶ್ವನಾಥ ಸೋಳಂಕಿ, ಉಪಾಧ್ಯಕ್ಷ ಮಾದು ಬದಿ, ಗೌ.ಕಾರ್ಯದರ್ಶಿ ನಾಗರಾಜ ಖೋಡೆ, ಸಹ ಕಾರ್ಯದರ್ಶಿ ಶ್ರೀಕಾಂತ ಬಾಕಳೆ, ಖಜಾಂಚಿ ಶ್ರೀನಿವಾಸ ಬಾಂಡಗೆ, ಮಹಿಳಾ ಮಂಡಳದ ಅಧ್ಯಕ್ಷೆ ರೇಖಾಬಾಯಿ ಖಟವಟೆ, ಕಸ್ತೂರಿಬಾಯಿ ಶಿದ್ಲಿಂಗ, ರೇಣುಕಾಬಾಯಿ ಕಲಬುರ್ಗಿ, ಗೀತಾ ಹಬೀಬ, ಅನ್ನಪೂರ್ಣ ಶಿದ್ಲಿಂಗ, ಉಮಾ ಬೇವಿನಕಟ್ಟಿ, ಶೋಭಾ ಬಾಂಡಗೆ, ಸಂಜು ಖಟವಟೆ, ಮೋಹನ ಪವಾರ, ಮನ್ನು ದಲಬಂಜನ, ಶ್ರೀಕಾಂತ ಅರಸಿದ್ಧಿ, ವಿಠ್ಠಲ ಶಿದ್ಲಿಂಗ, ಪರಶುರಾಮ ಬದಿ, ದೀಪಕ ಬಾಂಡಗೆ, ಜಗದೀಶ ಪವಾರ, ರಾಘವೇಂದ್ರ ಬಾಂಡಗೆ, ಮುಖೇಶ ಬಾಂಡಗೆ, ಪ್ರವೀಣ ಜಿತೂರಿ, ಸಂದೀಪ ಕಾಟಿಗರ, ಚೇತನ ಬಾಕಳೆ, ಭೀಮಾ ಕಾಟಿಗರ ಮುಂತಾದವರು ಉಪಸ್ಥಿತರಿದ್ದರೆಂದು ಕಮಿಟಿಯ ಗೌರವ ಕಾರ್ಯದರ್ಶಿ ವಿನೋದ ಶಿದ್ಲಿಂಗ ತಿಳಿಸಿದ್ದಾರೆ.

ತ್ರಿಕೋಟಿ ಶಿವಲಿಂಗ ಸ್ಥಾಪನೆ ಭೂಮಿಪೂಜಾ ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ

# ಗುರು ತೋರಿದ ಮಾರ್ಗದಲ್ಲಿ ನಡೆಯೋಣ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

'ಮಾನವ ಧರ್ಮಕ್ಕೆ ಜಯವಾಗಲಿ-ಧರ್ಮದಿಂದಲೇ ವಿಶ್ವಕ್ಕೆ ಶಾಂತಿ' ಎಂಬ ವಿಶ್ವಶಾಂತಿಯ ಸಂದೇಶ ಸಾರಿದ ಲಿಂ. ವೀರಗಂಗಾಧರ ಜಗದ್ಗುರುಗಳ ಸತ್ಯಶುದ್ಧ ಸಂಕಲ್ಪದಿಂದ ಅವರ ತಪೋಭೂಮಿಯಲ್ಲಿ ತ್ರಿಕೋಟಿ ಶಿವಲಿಂಗ ಸ್ಥಾಪನೆಯಾಗಿ, ವಿಶ್ವ ಧಾರ್ಮಿಕ ಕ್ಷೇತ್ರವಾಗಿ ಪರಿಣಮಿಸಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ಅವರು ಬುಧವಾರ ಲಕ್ಷ್ಮೇಶ್ವರ ಸಮೀಪದ ಭೂಕೈಲಾಸ ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ತ್ರಿಕೋಟಿ ಶಿವಲಿಂಗ ಸ್ಥಾಪನೆಯ ಮಹೋನ್ನತ ಕಾರ್ಯಕ್ಕೆ ಭೂಮಿಪೂಜೆ ನೇರವೇರಿದ ನಂತರ ನಡೆದ ಸಭೆಯನ್ನು ಉದ್ಘಾಟಿಸಿ ಮಾತನಾಡಿ, ಈ ಪುಣ್ಯ ಭೂಮಿಯಲ್ಲಿ ಜನಿಸಿದ ಬೊಮ್ಮಾಯಿ ಕುಟುಂಬವೂ ಶ್ರೀಮಠದ ಭಕ್ತ ಪರಂಪರೆಗೆ ಸೇರಿದೆ. ತಂದೆ ದಿ. ಎಸ್.ಆರ್ ಬೊಮ್ಮಾಯಿಯವರು 1962ರಲ್ಲಿ ರಾಜಕೀಯಕ್ಕೆ ಬರುವಂತೆ ಆಜ್ಞೆ ಮಾಡಿದ್ದ ಶ್ರೀಗಳು ಮುಂದೆ ಅವರು ಮುಖ್ಯಮಂತ್ರಿಯಾಗಲು ಸಹ ಹಾರೈಸಿದ್ದರು. ಅರಮನೆಯಲ್ಲಿ ತಪ್ಪು ನಡೆದಾಗ ತಿದ್ದುವ ಅಧಿಕಾರ ಗುರುಮನೆಗೆ ಇರುತ್ತದೆ. ಅಂತಹ ಶಕ್ತಿ ಗಂಗಾಧರ ಅಜ್ಜನಿಗಿತ್ತು. ಧರ್ಮ ಎಂದರೆ ಹಿಂಸಾಚಾರ ಮತ್ತು ಭಯೋತ್ಪಾದನೆ ಅಲ್ಲ. ಎಲ್ಲಿ ಭಯೋತ್ಪಾದನೆ, ಹಿಂಸೆ, ಅನ್ಯಾಯ, ಅಸತ್ಯ ಇದೆಯೋ ಅಲ್ಲಿ ಧರ್ಮ ಇರುವದಿಲ್ಲ ಎಂಬುದನ್ನು ಅರಿತು ಬದುಕಬೇಕೆಂದು ಗುರು ತೋರಿದ ಮಾರ್ಗದಲ್ಲಿ ಎಲ್ಲರೂ ನಡೆಯೋಣ. ಮುಕ್ತಿಮಂದಿರ ಧರ್ಮಕ್ಷೇತ್ರದ ಅಭಿವೃದ್ಧಿಗೆ ಶ್ರೀಗಳ ಪ್ರೇರಣೆಯಂತೆ ತಾವೂ 21 ಲಕ್ಷ ರೂ. ನೀಡುವುದಾಗಿ ಹೇಳಿದರು.

> ಲಿಂ. ವೀರಗಂಗಾಧರ ಜಗದ್ಗುರುಗಳ ತಪೋಭೂಮಿ ಮುಕ್ತಿಮಂದಿರಕ್ಕೆ ಬರದಿದ್ದರೆ ಮುಕ್ತಿ ಇಲ್ಲ. ಹುಟ್ಟು-ಸಾವಿನ ಬದುಕಿನ ನಡುವೆ ನ್ಯಾಯ, ನೀತಿ, ಧರ್ಮ, ಸಂಸ್ಕಾರ, ಮಾನವೀಯ ಮೌಲ್ಯದಿಂದ ಬದುಕಿದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ. ಮುಂದಿನ ದಿನಗಳಲ್ಲಿ ಈ ಕ್ಷೇತ್ರ ಪವಿತ್ರ ಧಾರ್ಮಿಕ ಕ್ಷೇತ್ರವಾಗಿ ಜಗ ಬೆಳಗಲಿದೆ. ನಡೆದಾಡುವ ದೇವರೆಂದೇ ಹೆಸರಾದ ಲಿಂ.ಜಗದ್ಗುರುಗಳ ವಾಣಿ ವಿಶ್ವಮಾನ್ಯವಾಗಿದೆ ಮತ್ತು ಅವರ ತಪಃಶಕ್ತಿಯಿಂದ ಲೋಕಕಲ್ಯಾಣವಾಗಲಿದೆ.
>
> – **ಬಸವರಾಜ ಬೊಮ್ಮಾಯಿ.**
> ಮಾಜಿ ಮುಖ್ಯಮಂತ್ರಿಗಳು.

ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ ಮಾತನಾಡಿ, ಲಿಂ.ಶ್ರೀ ವೀರಗಂಗಾಧರ ಜಗದ್ಗುರುಗಳ ತಪಃಶಕ್ತಿಯಿಂದಲೇ ಪುಣ್ಯ ಕ್ಷೇತ್ರದಲ್ಲಿ ತ್ರಿಕೋಟಿ ಶಿವಲಿಂಗ ಕಾರ್ಯ ನಡೆಯಲು ಸಾಧ್ಯವಾಗಿದೆ. ಈ ಪವಿತ್ರ ಕಾರ್ಯದಲ್ಲಿ ಪಾಲ್ಗೊಂಡಿರುವದು ನಮ್ಮೆಲ್ಲರ ಭಾಗ್ಯವಾಗಿದೆ. ಲಿಂ.ಶ್ರೀಗಳ ಹಾಗೂ ಎಲ್ಲ ಮಠಾಧೀಶರ ಕೃಪೆಯಿಂದ ಉತ್ತಮ ಮಳೆ-ಬೆಳೆಯಾಗಲಿ, ಜನರ ಕಷ್ಟಗಳು ಪರಿಹಾರವಾಗುವಂತೆ ಆಶೀರ್ವದಿಸಲಿ. ತ್ರಿಕೋಟಿ ಲಿಂಗ ಸ್ಥಾಪನೆಯ ನಂತರ ಇದೊಂದು ವಿಶ್ವ ಧಾರ್ಮಿಕವಾಗಲಿದೆ. ನೊಣವಿನಕೆರೆ ಶ್ರೀಗಳ ದಿವ್ಯಶಕ್ತಿ, ಪ್ರಭಾವ ರಾಜ್ಯಾದ್ಯಂತ ಪಸರಿಸಿದೆ. ಗಂಗಾಧರ ಜಗದ್ಗುರುಗಳ ಆಶೀರ್ವಾದ, ಇಚ್ಛಾಶಕ್ತಿ, ಸಹಕಾರದಿಂದ ಈ ಪುಣ್ಯ ಕಾರ್ಯ ಸಾಗರೋಪಾದಿಯಲ್ಲಿ ನಡೆಯಲಿದೆ ಎಂದರು.

> ವೇದಿಕೆಯ ಸಾನ್ನಿಧ್ಯ ವಹಿಸಿದ್ದ ನೊಣವಿನಕೇರಿ ಶ್ರೀಗಳನ್ನುದ್ದೇಶಿಸಿ ಜಗದೀಶ ಶೆಟ್ಟರ, 'ಏನಜ್ಜಾರ, ಎಲ್ಲಾರೂ ನಿಮ್ಮ ಮಠಕ್ಕ ಮುಗಿಬಿದ್ದಿದ್ದಾರೆ. ಯಾರೇನೆಲ್ಲ ಆಣಿ ಮಾಡಿದರೂ ನಿಮ್ಮ ಮೇಲೇ ಮಾಡತಾರ. ನಿಮ್ಮನ್ನೂ ಬಿಡವಲ್ರು ನೋಡ್ರಿ ಅಜ್ಜಾರ. ನಿಜ ಇದ್ದು ಆಣಿ ಮಾಡಿದ್ರ ಪರವಾಗಿಲ್ಲ. ಸುಳ್ಳು ಹೇಳಿ ಆಣಿ ಮಾಡಿದ್ರ ಏನ್ ಮಾಡಬೇಕು. ನಮ್ಮ ಪಾಪ-ಪುಣ್ಯ, ಕರ್ಮ-ಧರ್ಮ ಸುಳ್ಳು-ಸತ್ಯ, ನ್ಯಾಯ-ನೀತಿಯ ಫಲ ನಮ್ಮ ಅಕೌಂಟ್‌ಗೇ ಸೇರುತ್ತದೆ' ಎಂದಿದ್ದು, ಯಾರನ್ನೋ ಉದ್ದೇಶಿಸಿ ಟಾಂಗ್ ಕೊಟ್ಟಂತಿತ್ತು.

ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷರಾದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು, ನೊಣವಿನಕೆರೆ ಕಾಡಸಿದ್ದೇಶ್ವರ ಸಂಸ್ಥಾನಮಠದ ಶ್ರೀ ಡಾ.ಕರಿವೃಷಭ ದೇಶಿಕೇಂದ್ರ ಶಿವಯೋಗಿಶ್ವರ ಮಹಾಸ್ವಾಮಿಗಳು, ಬನ್ನಿಕೊಪ್ಪ, ಬಂಕಾಪುರ, ಗಂಜಿಗಟ್ಟಿ, ಕಲಾದಗಿ ಸೇರಿ ಅನೇಕ ಮಠಾಧೀಶರು, ಶಾಸಕರು, ರಾಜಕೀಯ ಮುಖಂಡರು, ಇಂಜಿನಿಯರುಗಳು, ಗುತ್ತಿಗೆದಾರರು, ಗಣ್ಯಮಾನ್ಯರು ಉಪಸ್ಥಿತರಿದ್ದರು.

# ಸೌಹಾರ್ದಯುತವಾಗಿ ಗಣೇಶ ಚತುರ್ಥಿ ಆಚರಿಸಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣವು ಶಾಂತಿ-ಸೌಹಾರ್ದತೆಗೆ ಹೆಸರುವಾಸಿಯಾಗಿದೆ. ಇಲ್ಲಿ ಎಲ್ಲಾ ಹಬ್ಬ-ಹರಿದಿನಗಳನ್ನು ಸೌಹಾರ್ದಯುತವಾಗಿ ಆಚರಣೆ ಮಾಡುತ್ತಾ ಬಂದಿದ್ದು, ಅದೇ ರೀತಿ ಗಣೇಶ ಚತುರ್ಥಿ ಹಬ್ಬವನ್ನು ಶಾಂತಿಯಿಂದ ಆಚರಣೆ ಮಾಡಬೇಕು ಎಂದು ಸಿಪಿಐ ಅಶೋಕ ಸದಲಗಿ ಹೇಳಿದರು.

ಅವರು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಗಣೇಶ ಚತುರ್ಥಿ ಹಬ್ಬದ ಅಂಗವಾಗಿ ಜರುಗಿದ ಶಾಂತಿ ಶಭೆಯನ್ನು ಉದ್ದೇಶಿಸಿ ಮಾತನಾಡಿ, ಗಣೇಶ ಪ್ರತಿಷ್ಠಾಪನಾ ಮಂಡಳಿಗಳ ಸರ್ವ ಸದಸ್ಯರು ಸರಕಾರ ನೀಡಿದ ನೀತಿ-ನಿಯಮಗಳನ್ನು ತಪ್ಪದೇ ಪಾಲಿಸಬೇಕು.

ಗಣೇಶ ಪ್ರತಿಷ್ಠಾಪನೆ ಮಾಡುವ ಮೊದಲು ಪರವಾನಿಗೆ ಪಡೆಯಬೇಕು. ಗಣೇಶ ಪ್ರತಿಷ್ಠಾಪನೆಯ ಸ್ಥಳ, ದಿನಾಂಕ, ವಿಸರ್ಜನೆಯ ಸ್ಥಳ ಹಾಗೂ ಸದಸ್ಯರ ಆಧಾರ್ ಕಾರ್ಡ್ ಪ್ರತಿಯನ್ನು ಲಗತ್ತಿಸಿ ಅರ್ಜಿಯನ್ನು ತುಂಬಿ ಕೊಡಬೇಕು.

ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಿ. ಹೆಚ್ಚಿನ ಮಾಹಿತಿಗಾಗಿ ಠಾಣೆಯ ದೂರವಾಣಿ 9972856349, 9535675244 ಸಂಪರ್ಕಿಸುವಂತೆ ಕೋರಿದರು.

ವರದಿಗಾರ ವೀರುಪಾಕ್ಷಪ್ಪಾ ಕಣವಿ, ಪೊಲೀಸ್ ಸಿಬ್ಬಂದಿಗಳಾದ ಸುನೀಲ್ ಉಗಾರಿ, ಮಂಜುನಾಥ ಲಮಾಣಿ, ಗಂಗಾಧರ ಕರಲಿಂಗನವರ, ಬಸವರಾಜ ಕೋಳಿವಾಡ, ಬಿ.ಎಂ ಕುರ್ತಕೋಟಿ, ಎಸ್.ಬಿ ಪಾಟೀಲ್, ಐ.ಸಿ ಕೇರಿಮನಿ, ರೋಹಿಣಿ ಹೂಗಾರ, ಎಸ್.ಎಚ್ ದಾಸರ, ಬಿ.ಎಚ್ ಬಿಳೆಹಾಳ ಹಾಗೂ ಮುಳಗುಂದ ಠಾಣಾ ವ್ಯಾಪ್ತಿಯ ಗ್ರಾಮಗಳ ಗಣೇಶ ಪ್ರತಿಷ್ಠಾನ ಮಂಡಳಿ ಸದಸ್ಯರು ಇದ್ದರು.

# ಕ್ರೀಡೆಯಲ್ಲಿ ಭಾಗವಹಿಸುವಿಕೆ ಮುಖ್ಯ: ನಡುವಿನಮನಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪ್ರಾಥಮಿಕ ಹಂತದಲ್ಲಿ ಮಕ್ಕಳು ದೈಹಿಕವಾಗಿ, ಮಾನಸಿಕವಾಗಿ ಸದೃಢರಾಗಲು ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಸಹಕಾರಿಯಾಗುತ್ತದೆ ಎಂದು ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ ನಡುವಿನಮನಿ ಹೇಳಿದರು.

ಅವರು ಪಟ್ಟಣದ ಎಸ್‌ಜೆಜೆಎಂ ಪದವಿಪೂರ್ವ ಮಾಹಾವಿದ್ಯಾಲಯದ ಆವರಣದಲ್ಲಿ ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಗಳ ಆಶ್ರಯದಲ್ಲಿ ಗದಗ ತಾಲೂಕು ಮಟ್ಟದ(ಗ್ರಾಮೀಣ ವಲಯ) ಪ್ರೌಢಶಾಲೆಗಳ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ಮುಳಗುಂದ ಕ್ರೀಡಾಕೂಟದಲ್ಲಿ ಹೆಚ್ಚು ಸಾಧನೆ ಮಾಡಿದ ಪಟ್ಟಣವಾಗಿದೆ. ಇಲ್ಲಿನ ಕ್ರೀಡಾಪಟುಗಳು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಛಾಪನ್ನು ಮೂಡಿಸಿ ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಂಡಿದ್ದಾರೆ. ಕ್ರೀಡೆಯಲ್ಲಿ ಭಾಗವಹಿಸುವಿಕೆ ಮುಖ್ಯವಾಗಿದ್ದು, ನಿರ್ಣಾಯಕರು ಕೊಟ್ಟ ನಿರ್ಣಯವನ್ನು ಗೌರವಿಸಿದಾಗ ಯಶಸ್ಸು ಸಾಧ್ಯವಾಗುತ್ತದೆ ಎಂದರು.

ಎಸ್.ಎಂ ನೀಲಗುಂದ ಮಾತನಾಡಿ, ಗ್ರಾಮೀಣ ಮಟ್ಟದ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಸಾಧನೆಯನ್ನು ಮಾಡುತ್ತಾ ಬಂದಿದ್ದು, ಅವರನ್ನು ಗುರುತಿಸಿ, ಪ್ರೋತ್ಸಾಹಿಸಿ ಇನ್ನೂ ಹೆಚ್ಚಿನ ಸಾಧನೆ ಮಾಡಲು ಎಲ್ಲರೂ ಕೈಜೋಡಿಸಿದಲ್ಲಿ ಮಕ್ಕಳಲ್ಲಿನ ನಿಜವಾದ ಪ್ರತಿಭೆಗಳು ಹೊರ ಬರುತ್ತವೆ, ಅವರ ಭವಿಷ್ಯ ಉಜ್ವಲಗೊಳ್ಳುತ್ತದೆ ಎಂದರು.

ಕ್ರೀಡಾ ಜ್ಯೋತಿಯನ್ನು ಡಾ.ಎಸ್.ಸಿ ಚವಡಿ ಸ್ವೀಕರಿಸಿದರು. ಬಿ.ಎಫ್ ಪೂಜಾರ, ಎಸ್.ವಿ ಭಾವಿ, ಪಿ.ಎ ವಂಟಕರ್, ಬಸವರಾಜ ಹಾರೋಗೇರಿ, ದೈಹಿಕ ಶಿಕ್ಷಕ ಎಸ್.ಆರ್ ಹಿರೇಗೌಡರ, ಎನ್.ವಾಯ್ ಸಂಗೊಂದಿ, ಇ.ಎಂ ಗುಳೆದಗುಡ್ಡ, ಎ.ಎಂ ಅಂಗಡಿ, ದೈಹಿಕ ಶಿಕ್ಷಣ ಪರಿವೀಕ್ಷಕ ಟಿ.ಎಸ್ ಪವಾರ್ ಇದ್ದರು.

# ಕನ್ನಡ ಫಿಲಂ ಛೇಂಬರ್‌ಗೆ ಸ್ವಂತ ಕಟ್ಟಡಕ್ಕೆ ಮನವಿ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಎರಡನೇ ಗಾಂಧಿನಗರ ಎಂದೇ ಹೆಸರುವಾಸಿ ಆಗಿರುವ ಕೊಪ್ಪಳ ಕನ್ನಡ ಫಿಲ್ಮ ಛೇಂಬರ್ ಸಭೆ ಸುಮಾರು 7 ವರ್ಷದಿಂದ ನಗರದಲ್ಲಿ ಖಾಸಗಿ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಇದು ರಾಜ್ಯದಲ್ಲೆ ಎರಡನೇ ದೊಡ್ಡ ಸಂಸ್ಥೆಯಾಗಿದ್ದು, ಕೊಪ್ಪಳಕ್ಕೆ ಹೆಮ್ಮೆಯ ವಿಷಯ ಆದರೆ ಇಲ್ಲಿಯವರೆಗೂ ಸರಕಾರದಿಂದ ಯಾವುದೆ ರೀತಿಯ ಸಹಕಾರ ಇಲ್ಲದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕನ್ನಡ ಫಿಲ್ಮ ಛೇಂಬರ್‌ಗೆ ಸ್ವಂತ ಕಟ್ಟಡಕ್ಕೆ ಸಹಕರಿಸಬೇಕೆಂದು ನಗರದ ಪ್ರವಾಸ ಮಂದಿರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಒತ್ತಾಯಿಸಲಾಯಿತು.

ಈ ಸಂದರ್ಭದಲ್ಲಿ ಮಹಾಂತೇಶ್ ಮಲ್ಲನಗೌಡರ, ನಿರ್ದೇಶಕ ಬಸವರಾಜ ಕೊಪ್ಪಳ, ಹಿರಿಯ ವಕೀಲರಾದ ವಿಜಯ್ ಅಮೃತ್ ರಾಜ್, ಜಿ ಎಮ್ ಶಿವಪುರ, ನಟ ಗಜ, ಯಮನೂರ್, ಪತ್ರಕರ್ತರಾದ ರಾಘವೇಂದ್ರ ಅರಕೇರಿ, ಬಸವರಾಜ, ಮರದೂರ, ಉದಯ ತೋಟದ, ಅಣ್ಣಪ್ಪ ಕಲಾಲ್, ಮೌಲ ಹುಸೇನ್, ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.



# 'ಆಯುಷ್ಮಾನ್ ಭವ್' ಕಾರ್ಯಕ್ರಮ ಉದ್ಘಾಟನೆ

■ವಿಜಯಸಾಕ್ಷಿ ಸುದ್ದಿ, ಗದಗ

ಭಾರತ ಸರ್ಕಾರವು ಆರೋಗ್ಯ ಸೇವೆಗಳನ್ನು ದೇಶದ ಎಲ್ಲಾ ಗ್ರಾಮಗಳಿಗೂ ಹಾಗೂ ಎಲ್ಲಾ ನಾಗರಿಕರಿಗೂ ತಲುಪಿಸುವ ನಿಟ್ಟಿನಲ್ಲಿ 'ಆಯುಷ್ಮಾನ್ ಭವ್' ಕಾರ್ಯಕ್ರಮವನ್ನು ರೂಪಿಸಿದ್ದು, ಈ ಅಭಿಯಾನಕ್ಕೆ ರಾಷ್ಟ್ರ ಮಟ್ಟದಲ್ಲಿ ಭಾರತ ಸರ್ಕಾರದ ರಾಷ್ಟ್ರಪತಿಗಳಾದ ದ್ರೌಪದಿ ಮುರ್ಮು ಅವರು ಬುಧವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಸಭಾಂಗಣದಲ್ಲಿ ವಿಡಿಯೋ



ಸಂವಾದದ ಮೂಲಕ ಅಧಿಕೃತ ಚಾಲನೆಯನ್ನು ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ವಿಧಾನ ಪರಿಷತ್ ಸದಸ್ಯ ಎಸ್.ವ್ಹಿ ಸಂಕನೂರ ಮಾತನಾಡಿ, ಈ ಕಾರ್ಯಕ್ರಮವು ಭಾರತ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಯಶಸ್ವಿಗೊಳಿಸಲು ಕರೆ ನೀಡಿದರಲ್ಲದೆ, ಕಾರ್ಯಕ್ರಮದ ಯಶಸ್ಸಿಗಾಗಿ ಇಲಾಖೆಯ ಜೊತೆ ಕೈಗೂಡಿಸುವದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಗದಗ-ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಮುದಕಮ್ಮನವರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಎಸ್. ನೀಲಗುಂದ, ಜಿಲ್ಲಾ ಸಮೀಕ್ಷಣಾಧಿಕಾರಿ ಡಾ. ವೆಂಕಟೇಶ ರಾಠೋಡ್, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ. ರಾಜೇಂದ್ರ ಬಸರಿಗಿಡದ, ಆರ್‌ಸಿಹೆಚ್‌ಓ ಅಧಿಕಾರಿ ಡಾ. ಬಿ.ಎಮ್ ಗೋಜನೂರ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ವಾಯ್.ಕೆ ಭಜಂತ್ರಿ ಮತ್ತು ಇಲಾಖೆಯ ಆಧಿಕಾರಿಗಳು ಮತ್ತು ಸಿಬ್ಬಂದಿಯವರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಎಸ್.ಎಸ್ ಪೀರಾ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

# ನೂತನ ಪದಾಧಿಕಾರಿಗಳ ನೇಮಕ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಕೊಪ್ಪಳ ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ದಲಿತ ಸಂಘರ್ಷ ಸಮಿತಿ ಸಂಘದ ಸಭೆಯಲ್ಲಿ ಪದಾಧಿಕಾರಿಗಳ ನೇಮಕ ಮಾಡಲಾಯಿತು.

ಈ ಸಂದರ್ಭದಲ್ಲಿ ಕೊಪ್ಪಳದ ಪತ್ರಕರ್ತರಾದ ಪ್ರಭು ಚೆನ್ನದಾಸರ್ ಅವರಿಗೆ ಸನ್ಮಾನ ಮಾಡಲಾಯಿತು. ಮತ್ತು ಕೊಪ್ಪಳ ಹಾಗೂ ತಾಲೂಕು ಮಟ್ಟದ ಪದಾಧಿಕಾರಿಗಳ ನೇಮಕ ಮಾಡಲಾಯಿತು.



ಕೊಪ್ಪಳ ಜಿಲ್ಲಾ ಅಧ್ಯಕ್ಷರಾದ ಮುದಕಪ್ಪ ಎಂ ಹೊಸಮನಿ ಮತ್ತು ಆನಂದ ಕರ್ಕಿಹಳ್ಳಿ ಕಂಟೆಪ್ಪಾ ಗಂಗಾವತಿ ಇವರ ನೇತೃತ್ವದಲ್ಲಿ ಯಲಬುರ್ಗಾ ತಾಲೂಕು ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಯಲ್ಲಪ್ಪ ದೊಡ್ಡಮನಿ, ಉಪಾಧ್ಯಕ್ಷರಾಗಿ ಬಸವರಾಜ್ ದೊಡ್ಡಮನಿ, ಖಜಾಂಚಿಯಾಗಿ ನೀಲಪ್ಪ ನಡುವಿನಮನಿ, ಸದಸ್ಯರಾಗಿ ಮಹಾಂತೇಶ ದೊಡ್ಡಮನಿ, ಕೆಂಚಪ್ಪ ಹರಿಜನ ಇವರನ್ನು ನೇಮಕ ಮಾಡಲಾಯಿತು.

ಸೆ.15ಕ್ಕೆ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮ: ತಹಸೀಲ್ದಾರ ವಾಣಿ ಉಂಕಿ

# ಕೊಟ್ಟ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ



■ವಿಜಯಸಾಕ್ಷಿ ಸುದ್ದಿ, ರೋಣ

ಸರಕಾರ ಹಾಗೂ ಇಲಾಖೆ ನೀಡಿರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಬೇಕು ಎಂದು ತಹಸೀಲ್ದಾರ್ ವಾಣಿ ಉಂಕಿ ಹೇಳಿದರು.

ಅವರು ಬುಧವಾರ ತಹಸೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಜರುಗಿದ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಸಭೆ ಆರಂಭಗೊಳ್ಳುತ್ತಿದ್ದಂತೆ ದಲಿತ ಮುಖಂಡ ಪ್ರಕಾಶ ಹೊಸಳ್ಳಿ ಮಾತನಾಡಿ, ಸಂವಿಧಾನ ಕೇವಲ ದಲಿತರಿಗೆ ಮಾತ್ರ ಸೀಮಿತವಾಗಿಲ್ಲ. ಸರಕಾರ ಎಲ್ಲ ಸಮುದಾಯವರನ್ನೂ ಆಹ್ವಾನಿಸಿ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮ ನಡೆಸಬೇಕು ಎಂದಿದ್ದರೂ ಸಹ ಇನ್ನಿತರ ಸಮುದಾಯದವರನ್ನು ಅಹ್ವಾನಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಹಸೀಲ್ದಾರ್ ವಾಣಿ ಉಂಕಿ ಮಾತನಾಡಿ, ಜಯಂತ್ಯುತ್ಸವ ಸೇರಿದಂತೆ ಸರಕಾರದ ನಿರ್ದೇಶನದ ಮೆರೆಗೆ ನಡೆಯುವ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸೂಚನೆ ಕೊಟ್ಟಿದ್ದರೂ ಸಹ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿರುವುದು ಸರಿಯಲ್ಲ. ಎಲ್ಲ ಸಮಾಜದ ಮುಖಂಡರುಗಳನ್ನು ಆಹ್ವಾನಿಸಲು ತಿಳಿಸಿದರೂ ನೀವು ಕ್ರಮ ತೆಗೆದುಕೊಂಡಿಲ್ಲ ಎಂದು ಅಧಿಕಾರಿ ಶಿವಾನಂದ ಹರ್ತಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

> ತಹಸೀಲ್ದಾರರ ಅಧ್ಯಕ್ಷತೆಯಲ್ಲಿ ಸೆ.15ರಂದು ನಡೆಯಲಿರುವ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮಕ್ಕೆ ಸರ್ವ ಸಮಾಜದವರನ್ನು ಆಹ್ವಾನಿಸಲಾಗುವುದು. ಕಾರ್ಯಕ್ರಮವನ್ನು ವ್ಹಿ.ಎಫ್ ಪ್ರೌಢಶಾಲಾ ಆವರಣದಲ್ಲಿ ಆಯೋಜಿಸಲಾಗುವುದು.
>
> – **ಶಿವಾನಂದ ಹರ್ತಿ.**
> ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ, ರೋಣ.

ಇದರಿಂದ ವಿಚಲಿತರಾದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಶಿವಾನಂದ ಹರ್ತಿಯವರು ದೂರವಾಣಿ ಮೂಲಕ ಸಂಪರ್ಕ ಮಾಡಲಾಗಿದೆ ಎನ್ನುತ್ತಿದ್ದಂತೆ ಸಿಟ್ಟಿಗೆದ್ದ ದಲಿತ ಮುಖಂಡ ಸಂಜಯ ದೊಡ್ಡಮನಿ, ಯಾರನ್ನು ಸಂಪರ್ಕ ಮಾಡಿದ್ದೀರಿ ಎಂಬುದನ್ನು ತಿಳಿಸಿ ಎಂದು ಪ್ರಶ್ನಿಸಿದಾಗ ಅಧಿಕಾರಿ ಶಿವಾನಂದ ಹರ್ತಿ ಮೌನಕ್ಕೆ ಶರಣಾದರು. ಮಧ್ಯ ಪ್ರವೇಶಿಸಿದ ಪಿಎಸ್‌ಐ ಎಲ್.ಕೆ ಜೂಲಕಟ್ಟಿಯವರು ಮುಖಂಡರನ್ನು ಸಮಾಧಾನಪಡಿಸಿ, ಸರಕಾರದ ನಿರ್ದೇಶನದಂತೆ ಸೆ.15ರಂದು ಎಲ್ಲ ಸಮುದಾಯದವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಎಂದು ಅಧಿಕಾರಿಗೆ ತಿಳಿಸುವ ಮೂಲಕ ಗೊಂದಲವನ್ನು ನಿವಾರಿಸಿ, ವಾತಾವರಣ ತಿಳಿಯಾಗಿಸಿದರು.

ತಾ.ಪಂ ಇಒ ರವಿ ಎ.ಎನ್, ವಾಲ್ಮೀಕಿ ಸಮಾಜದ ತಾಲೂಕಾಧ್ಯಕ್ಷ ಬಸವರಾಜ ತಳವಾರ, ಮೌನೇಶ ಹಾದಿಮನಿ, ವೀರಪ್ಪ ತೆಗ್ಗಿಮನಿ, ನಾಗರಾಜ, ಸಂಗಪ್ಪ ಹೊಸಮನಿ, ಹನ್ಮಂತ ದ್ವಾಸಲ, ಮಾರುತಿ ಹಿರೇಮನಿ, ಸುರೇಶ ನಡುವಿನಮನಿ ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳಿದ್ದರು.



ಕಳೆದ 123 ವರ್ಷಗಳಲ್ಲೇ ರಾಜ್ಯ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ತೀವ್ರ ಮಳೆ ಕೊರತೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ. ಈ ಸಂಬಂಧ ಸುಪ್ರೀಂ ಕೋರ್ಟ್ ಗೆ ಅರ್ಜಿ ಸಲ್ಲಿಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಹೇಳಿದ್ದಾರೆ.

## ನಿಧನ ವಾರ್ತೆ

### ಮಹೇಶ ಪಾಟೀಲ



**ಗದಗ:** ನಗರದ ವಿಎನ್‌ಟಿ ರಸ್ತೆ, ಹಾಳದಿಬ್ಬ ಓಣಿಯ ನಿವಾಸಿ ಮಹೇಶ ರಾಚಯ್ಯ ಪಾಟೀಲ(58) ಅವರು ಮಂಗಳವಾರ ರಾತ್ರಿ ನಿಧನರಾದರು.

ಮೃತರ ಅಂತಿಮಯಾತ್ರೆ ಬುಧವಾರ ಜರುಗಿತು. ಮೃತರು ಪತ್ನಿ, ಪುತ್ರ, ಪುತ್ರಿ, ಸಹೋದರಿಯರು ಸೇರಿದಂತೆ ಅಪಾರ ಬಳಗವನ್ನು ಅಗಲಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka